SRI Y. RAMAKRISHNA (Minister for Law & Parliamentary Affairs, Veterinary and Animal Husbandry).—Sir, before going to other Bills, my submission is item Nos. 4 and 8 be taken up first because these are the ordinances.

MR. SPEAKER.—Yes, The Minister may move the Bill.

THE KARNATAKA LEGAL AID BOARD BILL, 1981.

Motion to Consider

SRI Y. RAMAKRISHNA (Minister for Law & Parliamantary Affiars, veterinary and Animal Husbandry).—Sir, I beg to move.

"That the Karnataka Legal aid Board Bill, 1981, be taken into consideration.".

The question was proposed.

† ಶ್ರೀ ವೈ. ರಾಮಕೃಷ್ಣ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿಂಗದ ಜನರೇ ಆನುಚ್ಛಿದ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಆರ್ಥಿಕ ಅಥವಾ ಸಾಮಾಜಿಕ ವಿರುದ್ಧಿರುಗಳು ಎಷ್ಟೇ ಇದ್ದರೂ, ಅಸಮಾನತೆ ಎಷ್ಟೇ ಇದ್ದರೂ, ಸಂವಿಧಾನಗಳೊಂದನ್ನೂ ಕೂಡ ಗಣನೆಗೆ ತೆಗೆದುಕೊಳ್ಳದೆ, ಅವನಿಗೆ ದೊರಕಬೇಕಾದ ನ್ಯಾಯವನ್ನು ದೊರಕಿಸಿಕೊಡುವ ಮೂಲ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ. ದುರ್ಬಲವರ್ಗದವರಿಗೆ ಉಚಿತ ಕಾನೂನು ನೆರವನ್ನು ಒದಗಿಸಿಕೊಡಬೇಕು ಎಂಬ ಉದ್ದೇಶದಿಂದ ಇದನ್ನು ತರಲಾಗಿದೆ. ಇಲ್ಲಿಯವರೆಗೆ ದುರ್ಬಲರಾದವರಿಗೆ ಎಷ್ಟು ಒಂದು ಕೊರಗು ತರಾಗಲೂ ನೋವು ಇತ್ತು, ಆ ಒಂದು ನೋವನ್ನು ಹೋಗಲಾಡಿಸಲು ಹಾಗೂ ತಮಗಿರುವಂತಹ ಆರ್ಥಿಕ ಅಸಮಾನತೆಯಿಂದ ಹಾಗೂ ತಮ್ಮ ಒಂದು ದುರ್ಬಲತೆಯಿಂದ ತಮಗೆ ನ್ಯಾಯ ಸಿಗುವುದಿಲ್ಲ ಎಂಬ ಆವರ ಒಂದು ನೋವನ್ನು ಈ ಮಸೂದೆಯು ಮಾಯಕ ಪ್ರಕಾರಗಳ ಡಿಸಿ. ಸರ್ಕಾರವೇ ಅವರಿಗೆ ಸಹಾಯ ಕೊಟ್ಟು. ಬೇರೆಯವರ ಜೊತೆ ತಾವು ಸರಿ ಸಮಾನರಿಂಬುದನ್ನು ಅವರ ಮನಸ್ಸಿಗೆ ಮನವರಿಕೆ ಮಾಡಿಕೊಡುವುದೇ ಈ ಒಂದು ಮಸೂದೆಯ ಮುಖ್ಯ ಉದ್ದೇಶವಾಗಿದೆ. ನಮ್ಮ ಸರ್ಕಾರದವರು ಈ ಹಿಂದೆಯೇ ಒಂದು ಲೀಗಲ್ ಏಡ್ ಬೋರ್ಡನ್ನು ಮಾಡಿದ್ದರು. ನಮ್ಮ ಕರ್ನಾಟಕ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಒಬ್ಬರು ನ್ಯಾಯಾಧೀಶರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಿ. ಈ ಒಂದು ಕಾರ್ಯವನ್ನು ನಿರ್ವಹಿಸಬೇಕೆಂದು ಆದೇಶ ನೀಡಲಾಗಿತ್ತು. ಅದರಂತೆ ಅವರು ಕೆಲಸ ನಿರ್ವಹಿಸಿದರು. ಮತ್ತು ಉತ್ತಮವಾದ ಸ್ಕೀಮುಗಳನ್ನು ರಚನೆ ಮಾಡಿದರು. ಈ ಹಿಂದೆ ಭಾರತ ಸರ್ಕಾರದವರು ಸುಪ್ರೀಂ ಕೋರ್ಟಿನ ಜಡ್ಜ್‌ಗಳಾದಂಥ ಶ್ರೀಮಾನ್ ಭಗವತಿ ಮತ್ತು ಶ್ರೀಯುತ ಕೃಷ್ಣಯ್ಯರ್ ಅವರುಗಳು ಇರುವಂತಹ ಒಂದು ಸಮಿತಿಯನ್ನು ರಚನೆ ಮಾಡಿ, ಈ ಬಗ್ಗೆ ಒಂದು ವರದಿ ಕೊಡಬೇಕೆಂದು ಆದೇಶ ನೀಡಿದರು. ಅದರಂತೆ ಅವರುಗಳೂ ಸಹ ತಮ್ಮ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಈಗ ಈ ಒಂದು ವರದಿಯನ್ನು ಆಧಾರ ಮಾಡಿಟ್ಟುಕೊಂಡು ಈ ಒಂದು ಮಸೂದೆಯನ್ನು ತಯಾರಿಸಿ ಈ ಮನೆಯ ಒಪ್ಪಿಗೆಗಾಗಿ ಈಗ ಮಂಡಿಸಿದ್ದೇನೆ. ಈ ಮಸೂದೆಯಲ್ಲಿ ಸುಮಾರು ಒಳ ಸೆಕ್ಷನ್‌ಗಳಿವೆ. ಮತ್ತು ಬೆಳಧ್ಯಾಯಗಳಿವೆ. ಇದರಲ್ಲಿ ಮೊದಲನೆಯದು ಆಧ್ಯಾಯದ ಡೆಫಿನಿಷನ್ ಮತ್ತು ಎಕ್ಸ್‌ಪ್ಲನೇಷನ್ ಬಹಳ ಮುಖ್ಯವಾದುದು. ಅದರಂತೆ ಎರಡನೆಯ ಅಧ್ಯಾಯದಲ್ಲಿ ೧೦ ಸೆಕ್ಷನ್‌ಗಳಿವೆ. ಸೆಕ್ಷನ್ ನಾಲ್ಕರಲ್ಲಿ Compositoin of the Board ಬಗ್ಗೆ ಹೇಳಿದೆ. ಮತ್ತು ಇದರಲ್ಲಿ ಯಾರು ಯಾರು ಇರಬೇಕು ಎಂಬುದನ್ನು ಸಮೂಲ ಮಾಡಲಾಗಿದೆ. ಇದರಲ್ಲಿ ಕಾನೂನು ಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಡ್ವೋಕೇಟ್ ಜನರಲ್ ಅವರು. ಬೆಂಗಳೂರು ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್ ಅವರು. ಕರ್ನಾಟಕ ಸ್ಟೇಟ್ ಬಾರ್ ಕೌನ್ಸಿಲ್‌ನ ಚೇರ್‌ಮನ್ ಅವರು, ಕಾನೂನು ಕಾರ್ಯದರ್ಶಿಯವರು. ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರು. ಕಾರ್ಮಿಕ ಇಲಾಖೆಯ ಸೆಕ್ರೆಟರಿ ಅವರು. ಸರ್ಟಿಫೈಡ್ ಸ್ಟ್ಯಾಂಡಿಂಗ್ ಕೌನ್ಸಿಲ್ ಆಫ್ ಇನ್ಸ್‌ಪೆಕ್ಟರ್ ಅವರು ಎಕ್ಸ್-

ಆಫಿಸಿಯೋ ಸದಸ್ಯರಾಗಿರುತ್ತಾರೆ. ಇದರ ಜೊತೆಗೆ ಈ ಮನೆಯ ಇಬ್ಬರು ಸದಸ್ಯರುಗಳು ಮತ್ತು ಮೇಲ್ಮನೆಯ ಒಬ್ಬರು ಸದಸ್ಯರು ಇದರಲ್ಲಿ ಇರಬೇಕೆಂದು ನಮೂದು ಮಾಡಲಾಗಿದೆ. ಇದರ ಜೊತೆಗೆ ಸರ್ಕಾರದವರು ೮ ಜನರನ್ನು ನಾಮಕರಣ ಮಾಡಬಹುದು. ಈ ೮ ಜನರ ಪೈಕಿ, ಒಬ್ಬರು ಮಹಿಳೆ ಆಗಿರಬೇಕು. ಒಬ್ಬರು ಕಾರ್ಮಿಕರ ಹಿತಾಶಕ್ತಿಯನ್ನು ಕಾಪಾಡುವವರಾಗಿರಬೇಕು. ಒಬ್ಬರು ಹರಿಜನರ ಹಿತಾಶಕ್ತಿಯನ್ನು ಕಾಪಾಡುವವರಾಗಿರಬೇಕು. ಒಬ್ಬರು ಗಿರಿಜನರ ಹಿತಾಶಕ್ತಿಯನ್ನು ಕಾಪಾಡುವವರಾಗಿರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮಸೂದೆಯ ಮೂಲಕ ಹರಿಜನರ ಹಿತಾಶಕ್ತಿಯನ್ನು ಕಾಪಾಡಬಹುದೆಂಬ ಗ್ಯಾರಂಟಿಯನ್ನು ಕೊಡುತ್ತೀರಾ ?

ಶ್ರೀ ಪೈ. ರಾಮಕೃಷ್ಣ.—ಆ ಒಂದು ಉದ್ದೇಶ ಇಟ್ಟುಕೊಂಡೇ ಇದನ್ನು ಮಾಡಲಾಗಿದೆ. ಇದರಲ್ಲಿ ಹಿಂದುಳಿದ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಒಬ್ಬರು ಪ್ರತಿನಿಧಿ ಇರುತ್ತಾರೆ. ಇಬ್ಬರು ವಕೀಲರು ಇರುತ್ತಾರೆ. ಇವರ ಪೈಕಿ ಒಬ್ಬರು ಮಹಿಳೆಯರು ಇರುತ್ತಾರೆ ಹೀಗೆ Composition of the Board ನಲ್ಲಿ ಇಷ್ಟು ಮಂದಿ ಇದ್ದಾರೆ. ಇದು ಬಹಳ ದೊಡ್ಡ ಸಂಖ್ಯೆ ಎಂದು ಭಾವಿಸಿ, ಎಕ್ಸಿಕ್ಯುಟಿವ್ ಕಮಿಟಿ ಒಂದನ್ನು ರಚನೆ ಮಾಡಿದ್ದೇವೆ. ಇದರಲ್ಲಿ ಎಕ್ಸ್-ಆಫಿಸಿಯೋ ಚೇರ್‌ಮನ್ ಕಾನೂನು ಇಲಾಖೆಯ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರು ಮತ್ತು ಇಬ್ಬರು ಖಾಸಗೀ ಸದಸ್ಯರು ಇರುತ್ತಾರೆ. ಈ ಕಾರ್ಯನಿರ್ವಾಹಕ ಸಮಿತಿಯ ಜೊತೆಗೆ ಮೂರನೇ ಅಧ್ಯಾಯದಲ್ಲಿ ೪ ಸೆಕ್ಷನ್‌ಗಳಿವೆ. ೧೪ನೇ ಸೆಕ್ಷನ್‌ನಲ್ಲಿ ಈ ಬೋರ್ಡಿನ ಮೂಲ ಉದ್ದೇಶವೇನೆಂಬುದನ್ನು ನಮೂದು ಮಾಡಲಾಗಿದೆ. ಸೆಕ್ಷನ್ ೧೫ರಲ್ಲಿ ಈ ಬೋರ್ಡಿನ ಅಧಿಕಾರವ್ಯಾಪ್ತಿ ಹಾಗೂ ಈ ಬೋರ್ಡ್ ಏನೇನು ಕೆಲಸ ಮಾಡಬಹುದೆಂಬುದನ್ನು ಹೇಳಲಾಗಿದೆ. ಆದೇರೀತಿ ಸೆಕ್ಷನ್ ೧೬ರಲ್ಲಿ ಈ ಒಂದು ಉದ್ದೇಶ ಸಾಧನೆಗಾಗಿ ಸ್ಕೀಮುಗಳನ್ನು ಮಾಡುವ ಬಗ್ಗೆ ಹೇಳಲಾಗಿದೆ. ಇದು ಬಹಳ ಮುಖ್ಯವಾದುದು. ಇದರಲ್ಲಿ ಒಟ್ಟು ೨೨ ವಿಷಯಗಳನ್ನು ಸಂಗ್ರಹಣೆ ಮಾಡಲಾಗಿದೆ. ಇನ್ನು ಸೆಕ್ಷನ್ ೧೭ರಲ್ಲಿ ಯಾವ ಯಾವ ವರ್ಗಕ್ಕೆ ಆದ್ಯತೆ ಕೊಡಬೇಕೆಂಬುದನ್ನು ಹೇಳಲಾಗಿದೆ. ಇದನ್ನು ಸ್ವಲ್ಪ ಓದುತ್ತೇನೆ.

> "Special provision in schemes regarding certain categories of persons".—
>
> "In framing a scheme under section 16, due regard shall be had to the special need to provide legal aid to the following categories of persons namely"
>
> (a) members belong to the weaker sections of society and in particular to the Schedules Castes and the Scheduled Tribes and other backward classes.
>
> (b) agricultural labourers.
>
> (c) rural artisans and small farmers.
>
> (d) industrial workers.
>
> (e) women and children,
>
> (f) members of the armed forces, and ex-service men and their families, and
>
> (g) persons detained in jail, whether pending trial or undergoing sentence, or otherwise.

ಈ ಒಂದು ಕ್ಯಾಟಗರಿಯಲ್ಲಿ ಯಾರು ಯಾರು ಬರುತ್ತಾರೆ, ಅವರಿಗೆ ಆದ್ಯತೆ ಕೊಡಬೇಕೆಂದು ಇದರಲ್ಲಿ ನಮೂದು ಮಾಡಿದ್ದೇವೆ.

ಸ್ವಾಮಿ. ಳನೇ ಅಧ್ಯಾಯದಲ್ಲಿ ಹಣಕಾಸಿನ ವಿಚಾರ ಇದೆ. ಅದು ಹಣಕಾಸಿನ ಮೇಲ್ವಿಚಾರಣೆ. ಆಕೌಂಟ್ಸ್ ಆಫೀಸರ್ ಮತ್ತು ಹಣಕಾಸಿಗೆ ಸಂಬಂಧಪಟ್ಟದ್ದು. ೫ನೇ ಅಧ್ಯಾಯ ಸೀಕ್ರೆಸಿ. ಸೀಕ್ರೆಸಿ ಯಾವರೀತಿ ಮೆಂಟೈನ್ ಮಾಡಬೇಕು. ಒಂದು ವೇಳೆ ಬೌರ್ಡ್‌ನಲ್ಲಿ ಕೆಲಸಮಾಡತಕ್ಕ ವರ್ಗ ಏನಾದರೂ ಇರತಕ್ಕಂಥ ಗುಟ್ಟನ್ನು ಬಯಲು ಮಾಡಿದರೆ ಅವರಿಗೆ ಎಂತಹ ಶಿಕ್ಷೆ ಕೊಡಬೇಕು ಎಂದು ಪೀನಲ್ ಕ್ಲಾಸ್ ರಾಕಿರ್ದೆ. ಟಟ್ಟು ಳಿಳಿ ಸೆಕ್ಷನ್ಸ್ ಇರತಕ್ಕಂಥ ಈ ಮಸೂದೆಯನ್ನು ನಾನು ಈ ಸಭೆಯ ಮುಂದೆ ಮುಂಡಿಸಿದ್ದೇ. ನಾನು ತಿಳಿದಹಾಗೆ ರಾಷ್ಟ್ರದಲ್ಲಿ ಪ್ರಥಮವಾಗಿ ಇಂತಹ ಒಂದು ಆಕ್ಟನ್ನು ತರುತ್ತಾ ಇದ್ದೇವು. ದಯವಿಟ್ಟು ಮಾನ್ಯಸಬೆ ಇದಕ್ಕೆ ಅನ್ನು ಕೊಡಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ.

† ಶ್ರೀ ಜೆ. ಹೆಚ್. ಪಟೇಲ್ (ಹಿನ್ನಗಿರಿ).—ಮಾನ್ಯ ಅಧ್ಯಕ್ಷರೆ, ಈ ಮಸೂದೆಗೆ ಕನ್ನಡದಲ್ಲಿ "ಉಚಿತ ಬಡಾನು ಸಹಾಯ ಸಲಹಾ ನಿಗಮ" ಎಂದು ಹೆಸರು. ಈ ನಿಗಮವನ್ನು ಒಳ್ಳೆಯ ಉದ್ದೇಶದಿಂದ ಕಾನೂ ಮಂತ್ರಿಗಳು ಸದನದ ಮುಂದೆ ತಂದಿದ್ದಾರೆ ಇದರ ಉದ್ದೇಶವನ್ನು ಮಾನ್ಯ ಮಂತ್ರಿಗಳು ವಿವರಣೆ ಮಾಡುವಾಗ ಕೆಲವು ವಿಚಾರಗಳನ್ನು ಹೇಳಿದರು. ದುರ್ಬಲವರ್ಗದ ಮತ್ತು ಹಿಂದ ಳಿದ ವರ್ಗದವರು ಇವತ್ತಿನ ಸಮಾಜ ಸ್ಥಿತಿಯಲ್ಲಿ ಹೇಗೆ ಕಷ್ಟಕ್ಕೆ ಒಳಗಾಗುತ್ತಾರೆ ಮತ್ತು ಕಾನೂನಿನ ರಕ್ಷಣೆ ಸಿಗದ ಕೆಲವು ಸಾರಿ ಕಾನೂನು ಬಲೆಗೆ ಕೆಲವು ಮಂದಿ ಬೀಳುತ್ತಾರೆ ಅಂದರೆ ಅವರು ರಕ್ಷಣೆಗೆ ಯೋಗ್ಯರಾಗಿರುವ ಸಂದರ್ಭದಲ್ಲಿ ರಕ್ಷಣೆ ಪಡೆಯದೆ ಇದ್ದರೆ ಅದು ಅವರನ್ನು ಕರುಣೆಯಿಲ್ಲದೆ ಅಪರಾಧಿಗಳೆಂದು ಅಗುತ್ತಿಕೊಂಡಂತಾಗುತ್ತದೆ. ಕಾನೂನನ್ನು ಕೆಲವುಸಾರಿ ಓದಿದ್ದು ಆಷ್ಟೆ, ನಾನು ಇಲ್ಲಿ ಹೇಳಿಯಿಲ್ಲ. ಕೆಲವು ಸಾರಿ ಕಾನೂನು ಇದ್ದಾಗ್ಯೂ ಕಷ್ಟಗಳಿಗೆ ಸಮ್ಮನೆ ಒಬೆಯುವುದು ಮಂಗನ ಗೆಯ್ತ ಅಲ್ಲ. ತಿಳಿವುಸಾರಿಯಲ್ಲಿ ಹಾಗೆ ಒಬೆಯಲು ಕೆಲವು ಅವರಿಗೆ ಒದೆಯುವುದಿಲ್ಲ, ಮಾನ್ಯ ಕಾನೂನಿನ ಸಾರಾಂಶವನ್ನು ನಿರರ್ಥಗೊಳಿಸುವಂತೆ ಅದರ ಒದ್ದುಬಿಡುತ್ತಾರೆ. ಇದರ ಒಳಗೆ ಒಬೆಯುವುದು ಕೆಲವು ಸಮಯಗಳಲ್ಲಿ ಕೆಲವು ಸಮಯಗಳಲ್ಲಿ ಇರುತ್ತದೆ. ಇವರೆಲ್ಲರೂ ತಾವು ಸ್ವತಃ ಬಿದ್ದು ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಕಾನೂನಿನಲ್ಲಿ ಇನ್ನೂ ಬಹಳ ಇದೆ. ಕಾನೂನು ಬಗ್ಗೆ ಅಜ್ಞಾನ ಅದರ ಮುಂಚಿತ ತೂರಿ ಹೊರಗಿನಿಂದ ಬೇರೆಯವರು ಅವನ್ನು ತಂದು ಕೊಟ್ಟಾಗ ಮಾತ್ರ ಅದು ಇಂಥಹ ಸತ್ಯ ಆದರೆಯಲ್ಲಿ ಸಣ್ಣವರು ತೂರಿ ಕೊಂಡು ಬಿದ್ದು ಕಷ್ಟಕ್ಕೆ ಸಿಕ್ಕುವುದು, ಸಣ್ಣವರು ಬಿದ್ದಾಗಲೂ ದೊಡ್ಡವರು ಒಳಗಿನಿಂದ ಹೊರಗಿನಿಂದ ಹೊರಗೆ ಬರುವುದು. ಇನ್ನು ವಿಚಾರಣೆಗಳು, ಕ್ರಿಮಿನಲ್ಲುಗಳು ಇರತಕ್ಕವರು ಕಾನೂನಿನ ಬಿಡಿಗೆ ಸಿಕ್ಕುವಾರರು ಎನ್ನ ತಕ್ಕ ಕಾರಣದಿಂದ ಈ ಒಂದು ನಿಗಮವನ್ನು ಸಾದನದ ಮುಂದೆ ಮುಂಡಿಸಿದ್ದಾರೆ. ಇದರ ಉದ್ದೇಶವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದರ ವಿವರಗಳನ್ನು ಮಾನ್ಯ ಲಕ್ಷ್ಮೀಸಾಗರ್ ರವರು ವಕೀಲಿಯಲ್ಲಿ ಪರಿಣಿತರು ಆದರು ಈ ವಿಷಯದಲ್ಲಿ ನನಗಿಂತ ಹೆಚ್ಚು ಪ್ರಸ್ತಾಪ ಮಾಡುತ್ತಾರೆ. ಈ ಸಂದರ್ಭದಲ್ಲಿ ಒಂದು ವಿಷಯ ನನ್ನ ಗಮನಕ್ಕೆ ಬಂದಿದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಈ ಉಚಿತ ಕಾನೂನು ಸಹಾಯ ಮಾಡತಕ್ಕಂಥ ಕ್ರಮ ಏನಿದೆ ನಿಮ್ಮಿದು ಮುಂದೆ ಏನು ಮಾಡುತ್ತೀರಿ ಅಂದರೆ ಬಿಲ್ಲಾ ಮತ್ತು ಬೇರೆ ಬೇರೆ ಮಟ್ಟದಲ್ಲಿರತಕ್ಕ ಕೋರ್ಟುಗಳಲ್ಲಿ ವಕೀಲರುಗಳನ್ನು ನೀವು ನೇಮಕ ಮಾಡುತ್ತೀರಿ. ಸಾಮಾನ್ಯವಾಗಿ ನಾನು ನೋಡಿದಹಾಗೆ, ಫ್ರೀ ಲೀಗಲ್ ಏಯ್ಡ್‌ನ ವಕೀಲರು ಏನಿದ್ದಾರೆ ಅವರು ಕ್ಷಿಪಾರರು ದುರ್ಬಲ ವರ್ಗದವರು ಇರಬೇಕು ಮತ್ತು ಹಿಂದುಳಿದ ವರ್ಗದವರು ಇರಬೇಕು ಎನ್ನುವಾಗ ಆರಿಸಿರತಕ್ಕಂಥ ವಕೀಲರು ದುರ್ಬಲ ವರ್ಗದವರು, ಹಿಂದುಳಿದ ವರ್ಗದವರು ಇರಬೇಕು ಎಂದು ಇಲ್ಲತಾನೇ. ಹಾಗೇನಿಲ್ಲ, ನಾನು ನೋಡಿದ ಹಾಗೆ, ಕ್ಷಿಗಾರರಿಗಿಂತ ಕಡಿಮೆ ತಿಳಿದುಕೊಂಡಿರತಕ್ಕ ಲಾಯರುಗಳನ್ನೆ ನಾನು ನೋಡಿದ್ದೇನೆ. ಫ್ರೀ ಲೀಗಲ್ ಏಯ್ಡ್‌ನಲ್ಲಿ ಸ್ವತಃ ಕಕ್ಷಿದಾರರೇ ಹೋದರೆ ಉಳಿಸುಕೊಳ್ಳಬಹುದು. ಫ್ರೀ ಲೀಗಲ್ ಏಯ್ಡ್‌ನ ವಕೀಲರು ನಾನು ನೋಡಿರುವಹಾಗೆ ಕೆಲವರು. ಎಲ್ಲರೂ ಹಾಗೆ ಎಂದು ಹೇಳುವುದಿಲ್ಲ. ಸಮರ್ಥರಾದ ಮಾನ್ಯ ಲಕ್ಷ್ಮೀಸಾಗರ್‌ರವರಂಥವರನ್ನು ಫ್ರೀ ಲೀಗಲ್ ಏಯ್ಡ್‌ಗೆ ಯಾರೂ ಕರಿಸುವುದಿಲ್ಲ.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್‌ರವರನ್ನು ಕರಿಸಿದರೆ ಆಫೀಸ್ ಆಫ್ ಪ್ರಾಫಿಟ್ ಆಗಿ ಅವರು ಇಲ್ಲಿರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಹಾಗಾಗಿ ಕಕ್ಷಿದಾರರ ಹಿತರಕ್ಷಣೆ ಅಲ್ಲ ಸ್ವತಃ ತಮ್ಮ ಹಿತರಕ್ಷಣೆ ಆಗುತ್ತದೆ. ಫ್ರೀ ಲೀಗಲ್ ಏಯ್ಡ್‌ನಲ್ಲಿ ವಕೀಲರುಗಳು ಏನು ಬರುತ್ತಾರೆ ಅವರಿಗೆ ಅಥವಾ ಫ್ರೀ ಲೀಗಲ್ ಏಯ್ಡ್‌ನಲ್ಲಿ ಯಾರು ಲಾಯರು ಇದ್ದಾರೆ ಅವರಿಗೇ ಸಿಗುತ್ತದೆ. ಬಹಳ ಜನ ಲಾಯರ್‌ಗೇ ಇದರ ಲಾಭ ಹೋಗುತ್ತದೆ. ನಾನು ಬಹಳ ಕಡೆ ನೋಡಿದ್ದೇನೆ. ಒಟ್ಟು ಅರ್ಥ ಏನೆಂದರೆ, ಸಮರ್ಥರಲ್ಲದೇ ಇರ ತಕ್ಕಂಥ ವಕೀಲರುಗಳನ್ನು ಯಾವುದೋ ರಾಜಕೀಯಕ್ಕೋಸ್ಕರ ಫ್ರೀ ಲೀಗಲ್ ಏಯ್ಡ್ ಕೊಡುವುದ ಕ್ಕೋಸ್ಕರ ಮಾಡಬೇಡಿ. ಮೇಲೆ ಹೇಳಿರತಕ್ಕ ಉದ್ದೇಶಗಳು ಒಂದೇ ಕಾರ್ಯದಲ್ಲಿ ನಿಷ್ಪಲವಾಗುತ್ತವೆ. ಆದುದರಿಂದ ಉಳಿದೆಲ್ಲವನ್ನೂ ನಾನು ಸ್ವಾಗತಿಸುತ್ತೇನೆ. ಸರ್ಕಾರ ಇದನ್ನು ಜಾರಿಗೆ ಕೊಡುವಾಗ ನಿಜ ವಾಗಿ ಯಾರಿದ್ದಾರೆ, ಯಾರಿಗೆ ಕಾನೂನಿನ ರಕ್ಷಣೆ ಬೇಕು, ದುರ್ಬಲವರ್ಗದವರನ್ನು ರಕ್ಷಣೆ ಮಾಡಬೇಕು ಎನ್ನುವ ಚಿಂತೆ ಇದ್ದರೆ ನಿಜವಾಗಲೂ ಸಮರ್ಥರಾದಂಥ ವಕೀಲರುಗಳನ್ನು ಈ ಕೆಲಸಕ್ಕೆ ಹಚ್ಚುವಂಥ ಕೆಲಸ ಆಗಬೇಕು, ಅವರಾಗಿ ಕೆಲಸ ತೆಗೆದುಕೊಳ್ಳುವ ಹಾಗೆ ಮಾಡಬೇಕು ಎಂದು ನಾನು ಹೇಳುತ್ತೇನೆ.

† ಶ್ರೀ ಪಿ ಎನ್. ರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಕಾನೂನಿನ ನೆರವು ಸಮಿತಿಯ ಮಸೂದೆಯನ್ನು ನಮ್ಮ ಮುಂದಿಟ್ಟಿರುವುದು ಸಂತೋಷದ ವಿಷಯ ಹಿಂದೆ ಇದೇ ಕರ್ನಾಟಕದ ಕಾನೂನು ನೆರವು ಹಾಗೂ ಸಲಹಾ ಸಮಿತಿ ಎಂದು ಇತ್ತು. ಅದಕ್ಕೆ ಮುಖ್ಯ ನ್ಯಾಯಾ ಧೀಶರು ಅಧ್ಯಕ್ಷರಾಗಿದ್ದರು. ಎಕ್ಸಿಕ್ಯೂಟೀವ್ ಛೇರ್ಮನ್ನಾಗಿ ಇನ್ನೊಬ್ಬ ನ್ಯಾಯಾಧೀಶರಿದ್ದರು. ಅದೇ ರೀತಿ ಕೆಲವರನ್ನೊಳಗೊಂಡ ಸಮಿತಿ ಸಹ ಇತ್ತು. ಆದರೆ ಈಗ ಇದನ್ನೇ ಬೇರೆ ರೀತಿಯಲ್ಲಿ ಕರ್ನಾಟಕ ಕಾನೂನು ನೆರವು ಸಮಿತಿಯನ್ನು ಮಾರ್ಪಡಿಸಿ ಒಂದು ಬಿಲ್ಲನ್ನು ಸರ್ಕಾರದವರು ತಂದಿದ್ದಾರೆ. ಒಂದು ಸಂತೋಷದ ವಿಷಯ ಅಂದರೆ, ನ್ಯಾಯಾಧೀಶರುಗಳನ್ನು ಬಿಟ್ಟು ಕಾನೂನು ಮಂತ್ರಿಗಳನ್ನು ಅಧ್ಯಕ್ಷರ ನ್ನಾಗಿ ಮಾಡಿರುವುದು ಬಹಳ ಸಂತೋಷದ ವಿಷಯ. ಜೊತೆಗೆ ಎಕ್ಸಿಕ್ಯೂಟೀವ್ ಛೇರ್ಮನ್ ಹಾಕಿದ್ದಾರೆ, ಹಿಂದೆ ನ್ಯಾಯಾಧೀಶರೇ ಇದ್ದರು. ಈಗ ಈ ಬಿಲ್ಲಿನಲ್ಲಿ ಯಾರಾದರೂ ಸದಸ್ಯರನ್ನು ಎಕ್ಸಿಕ್ಯೂಟೀವ್ ಛೇರ್ಮನ್ನಾಗಿ ತರಬೇಕು ಎಂದು ಮಾಡಿದ್ದೀರಿ, ಇದು ಇನ್ನೂ ಸಂತೋಷದ ವಿಷಯ. ನಾನು ಏಕೆ ಹೇಳು ತ್ತಿದ್ದೇನೆಂದರೆ, ನ್ಯಾಯಾಧೀಶರಿಗೆ ಬಹಳ ಆಕಾಂಕ್ಷೆ ಇರುತ್ತದೆ. ಮಾಮೂಲು ಮನುಷ್ಯನನ್ನು ನೋಡ ಬೇಕು, ಆಪರಿಂದ ಸಲಹೆಗಳನ್ನು ಪಡೆಯಬೇಕು ಎಂದು ಇರುತ್ತದೆ. ಆದರೆ ಮಾಮೂಲು ಮನುಷ್ಯನಿಗೆ ಒಂದು ಉಚಿತ ನ್ಯಾಯಾಲಯದ ನ್ಯಾಯಾಧೀಶರನ್ನು ಕಾಣಬೇಕಾದರೆ ಬಹಳ ಭಯ. ಹಳ್ಳಿಯಲ್ಲಿ ಅವಲ್ಲಾರರ ಹತ್ತಿರಕ್ಕೆ ಹೋಗುವುದು ಕಷ್ಟ. ರೆವಿನ್ಯೂ ಇನ್‌ಸ್ಪೆಕ್ಟರ್ ಹತ್ತಿರ ಮಾಮೂಲು ಮನುಷ್ಯ ಹೋಗುವುದು ಕಷ್ಟ. ಅಂಥಾದ್ದರಲ್ಲಿ ಮುಖ್ಯ ನ್ಯಾಯಾಧೀಶರಲ್ಲಿ ಹೋಗಿ ಅಲ್ಲಿ ಆಪರ ಸಮಸ್ಯೆಗಳನ್ನು ಹೇಳುವುದು ಬಹಳ ಕಷ್ಟ. ಇನ್ನೊಂದು ವಿಷಯವೇನೆಂದರೆ, ಹೋದಸಲ ಕಾನೂನು ಸಲಹಾ ಸಮಿತಿ ಇತ್ತಲ್ಲ ಅದಕ್ಕೆ ನಾನೂ ಒಬ್ಬ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದೆ. ಇನ್ನೂ ಕೆಲವರು ಇದ್ದರು. ಅದು ಅಷ್ಟು ಸಮರ್ಪಕವಾಗಿ ನಡೆಯಲಿಲ್ಲ. ಏಕೆಂದರೆ, ಒಂದು ಕಡೆ ಸರ್ಕಾರಕ್ಕೂ, ಸಮಿತಿಗೂ ಸುಗಮ ವಾದ ಕಾರ್ಯನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಇನ್ನೊಂದು ಕಡೆ ಪ್ರಚಾರ ಇರಲಿಲ್ಲ. ಪ್ರಚಾರವಿಲ್ಲದೇ ಹೋದರೆ ನಾವು ಕಾನೂನು ಸಲಹಾ ಸಮಿತಿಗೆ ಎಷ್ಟು ದುಡ್ಡು ಖರ್ಚು ಮಾಡಿದರೂ ಆಗುವುದಿಲ್ಲ. ಹೋದಸಲ ಸುಮಾರು ೧೯೭೬ನೇ ಇಸವಿಯಲ್ಲಿ ಆಗಿದ್ದಕ್ಕೆ ೫೦೦ ಕೇಸುಗಳು ನನಗೆ ಕಂಡಹಾಗೆ ತೀರ್ಮಾನವಾಗಿತ್ತು, ಅದರಲ್ಲಿ ೧೦ ಲಕ್ಷ ರೂಪಾಯಿಗಳನ್ನು ಹಿಂದೆ ಸರ್ಕಾರದವರು ಗ್ರಾಂಟ್ ಮಾಡಿದ್ದರು. ಈ ಕಾನೂನು ಸಲಹಾ ಸಮಿತಿಯವರು ೪ ವರ್ಷಗಳಲ್ಲಿ ಹಣವನ್ನು ಖರ್ಚು ಮಾಡದೆ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ವಾಪಸು ಕೊಟ್ಟುಬಿಟ್ಟರು. ಇದಂ ನಿಜ ವಾಗಲೂ ನಗುವಂಥ ವಿಷಯ ಅನಿಸುತ್ತದೆ. ಇನ್ನು ಮಿಕ್ಕಿದರಲ್ಲಿ ಮೂರು ಲಕ್ಷದವರೆಗೂ ಎಸ್ಟಾಬ್ಲಿಷ್ ಮೆಂಟ್ ಚಾರ್ಜಸ್ ಆಯಿತು. ವಕೀಲರಿಗೆ ಅಬ್ಬಬ್ಬ ಅಂದರೆ ನಾಲ್ಕೈದು ಸಾವಿರ ಅಂದರೆ ೧೦ ಸಾವಿರ ರೂಪಾಯಿಗಿಂತ ಹೆಚ್ಚಾಗಿ ಬಂದಿಲ್ಲ ೪ ವರ್ಷಗಳಲ್ಲಿ. ಇನ್ನೊಂದು ವಿಷಯವೇನೆಂದರೆ, ಹಿಂದೆ ಸಲಹಾ ಸಮಿತಿಯಲ್ಲಿ ನಾನು ಕಲವು ಕಡೆ ಪ್ರವಾಸ ಮಾಡಿದ್ದೇನೆ. ಆಲ್ಲಿ ಹಿಂದೆ ಕೊಡುತ್ತಿದ್ದರು. ಈಗಲೂ ಆ ಕಮಿಟಿಗಳು ಕಂಟಿನ್ಯೂ ಆಗಿದ್ದಾವೋ ಗೊತ್ತಿಲ್ಲ. ಆಲ್ಲಿನ ಆಡ್ವೋಕೇಟ್ ಸೆಕ್ರೆಟರಿಗೆ ತಿಂಗಳಿಗೆ ೫೦ ರೂಪಾಯಿ ಪರಮಾನ ಕೊಡುತ್ತಿದ್ದರು. ಆಫೀಸಿಗೆ ೨೦೦ ರೂಪಾಯಿ, ಟೈಪಿಸ್ಟಿಗೆ ೧೫೦ ರೂಪಾಯಿ

ಕೊಡುತ್ತಿದ್ದರು. ಜವಾನರಿಗೆ ೧೦೮–೧೫೦ ರೂಪಾಯಿ ಕೊಡುತ್ತಿದ್ದರು. ಹೀಗಾಗಿ ಎರಡು ವರ್ಷಗಳಲ್ಲಿ ಸುಮಾರು ಒಂದೊಂದು ಜಿಲ್ಲೆಗೆ ೨೩–೨೪ ಸಾವಿರ ರೂಪಾಯಿ ಎಸ್ಟಾಬ್ಲಿಷ್‌ಮೆಂಟ್‌ಗೆ ಆದರೆ ಕೇಸುಗಳು ಎಷ್ಟು ಬಂದಿತ್ತು ಅಂದರೆ ೯. ಮಂಡ್ಯ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ೧೫ ಕೇಸುಗಳು ಬಂದಿತ್ತು. ೨೩ ಸಾವಿರ ರೂಪಾಯಿ ಖರ್ಚು, ೧೫ ಕೇಸು. ವಕೀಲರಿಗೆ ಸುಮಾರು ೨೦೦–೩೦೦ ರೂಪಾಯಿ ದುಡ್ಡು ಹೋಗಿತ್ತು ಅಷ್ಟೆ.

೫.೦೦ ಪಿ.ಎಂ.

ಇದೇ ರೀತಿ ಮೈಸೂರಿನಲ್ಲಿ ನೋಡಿದಾಗ ಅಲ್ಲಿ ಸುಮಾರು ೨೩,೨೪ ಸಾವಿರ ಖರ್ಚಾಗಿತ್ತು ಆದರೆ ಕೇಸ್‌ಗಳು ಬಂದಿದ್ದು ೯. ಈ ರೀತಿಯೇಲ್ಲಾ ಹಿಂದೆಲ್ಲಾ ನಡೆದುಕೊಂಡು ಬರುತ್ತಿದೆ. ಆದಕ್ಕೆ ನಾನು ಹೇಳಿದ್ದು ಇದರಲ್ಲಿ ಸರ್ಕಾರಕ್ಕೆ ಅಧಿಕಾರಿಗಳು ಇರಲಿ, ಮಿಕ್ಕವರು ಹೆಚ್ಚಿಗೆ ಇರಬಾರದೆಂದು ಹೆಚ್ಚಿಗೆ ಏನಾದರೂ ಹಾಕಿದರೆ ಈ ತಾಪತ್ರಯ. ಹಿಂದೆ ನಾವು ಸುಮಾರು ೧೯೭೪–೭೫ ರಲ್ಲಿ ವಕೀಲರ ವೇದಿಕೆ ಅಂತ ಎಲ್ಲಾ ವಕೀಲರು ಸೇರಿಕೊಂಡು ಉಚಿತವಾಗಿ ನಡೆಸುತ್ತಿದ್ದೆವು, ಸರ್ಕಾರದಿಂದ ಯಾವುದೇ ಧನ ಸಹಾಯವನ್ನು ಪಡೆದಿರಲಿಲ್ಲ. ನಮ್ಮ ಈ ಕೆಲಸವನ್ನು ನೋಡಿ ಆಗ ಬಂದಿದ್ದ ಜಸ್ಟೀಸ್ ಭಗವತಿಯವರು ಸಂತೋಷ ಪಟ್ಟಿದ್ದರು. ನಾವು ಇದರ ಬಗ್ಗೆ ಅತಿ ಉತ್ಸಾಹ, ಅಪೇಕ್ಷೆ ಪಟ್ಟಿದ್ದರಿಂದ ೧೯೭೬ ನಲ್ಲಿ ಒಂದು ಸಲಹಾ ಸಮಿತಿಯನ್ನು ಮಾಡಿದರು. ಆಗ ನಾವು ಏನು ಅಪೇಕ್ಷೆ ಪಟ್ಟಿದ್ದೆವು ಎಂದರೆ ಆದರಲ್ಲಿ ಒಬ್ಬರು ಖಾಸಗಿ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಆಗ ಆಗಿರಲಿಲ್ಲ, ಈಗ ಕಾನೂನು ಮಂತ್ರಿಗಳ ವರು ಬಹಳ ಧೈರ್ಯ ತೆಗೆದುಕೊಂಡು ಇದನ್ನು ಹೊಸದಾಗಿ ಮಾಡಿದ್ದಾರೆ; ಕಾನೂನು ಮಂತ್ರಿಗಳ ವರೇ ಅಧ್ಯಕ್ಷರನ್ನಾಗಿ ಹಾಕಿರುವುದನ್ನು ನೋಡುತ್ತಿದ್ದೇವೆ.

ಇನ್ನು ಪ್ರಚಾರ ಎಂದು ಹೇಳಿದ್ದೀರಿ. ಈ ಬೋರ್ಡ್‌ನಲ್ಲಿ ಯಾರು ಯಾರನ್ನು ಹಾಕಿದ್ದೀರಿ ಎಂದರೆ ಹಣಕಾಸಿನ ಕಾರ್ಯದರ್ಶಿಯವರನ್ನು ಹಾಕಿದ್ದೀರಿ. ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರನ್ನು ಹಾಕಿದ್ದೀರಿ, ಆದರೆ ನಾನು ಹೇಳುತ್ತೇನೆ ಈ ಪ್ರಚಾರಕ್ಕೆ ಎಂದರೆ ತಾಲ್ಲೂಕ್‌ಗಳಲ್ಲಿ ಅಥವಾ ಡಿಸ್ಟ್ರಿಕ್ಟ್‌ನಲ್ಲಿ ಯಾಗಲೀ ಇಲ್ಲವೇ ಪಂಚಾಯಿತಿ ಮೂಲಕ, ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮುಖಾಂತರ ಪ್ರಚಾರ ಮಾಡುವುದಕ್ಕೆ ಆಗುತ್ತದೆ, ತಾಲ್ಲೂಕ್ ಡೆವೆಲಪ್‌ಮೆಂಟ್ ಬೋರ್ಡ್‌ಗಳಲ್ಲಿ ಸೋಶಿಯಲ್‌ವೆಲ್‌ಫೇರ್ ಆಫೀಸರ್ ಇರುತ್ತಾರೆ ಅವರನ್ನು ಇದರಲ್ಲಿ ಹಾಕದಿದ್ದರೆ ನಿಮ್ಮ ಧ್ಯೇಯವೇ ನಿದೆ ಆದು ಪ್ರಚಾರಕ್ಕೆ ಬರುವುದಿಲ್ಲ ಮತ್ತು ಇದರಿಂದ ಪ್ರಯೋಜನವೂ ಆಗುವುದಿಲ್ಲ. ಮತ್ತೆ ಚೀಫ್ ಇನ್ಸ್‌ಸ್ಪೆಕ್ಟರ್ ಆಫ್ಸ್ ಸರ್ಟಿಫೈಡ್ ಸ್ಕೂಲ್ಸ್ ಎಂದು ಹೇಳಿದ್ದೀರಿ, ಇವರನ್ನು ಏತಕ್ಕೆ ಹಾಕಿದ್ದೀರೋ ಅರ್ಥವಾಗುವುದಿಲ್ಲ. ಇವರ ಬದಲು ಡೈರೆಕ್ಟರ್ ಆಫ್ ಎಜುಕೇಷನ್ ರವರನ್ನಾದರೂ ಹಾಕಿ, ಇಲ್ಲವೇ ವಿದ್ಯಾ ಇಲಾಖೆಯ ಕಾರ್ಯದರ್ಶಿಯವರನ್ನಾದರೂ ಇಟ್ಟುಕೊಳ್ಳಿ ಪರವಾಗಿಲ್ಲ ಅವರ ಬದಲು ಈ ಚೀಫ್ ಇನ್ಸ್‌ಸ್ಪೆಕ್ಟರ್ ಆಫ್ ಸರ್ಟಿಫೈಡ್ ಸ್ಕೂಲ್ ಏನಿದ್ದಾರೆ ಅವರನ್ನು ಹಾಕುವುದು ಅನಾವಶ್ಯಕವೆಂದು ನನಗನ್ನಿಸುತ್ತದೆ. ಆದುದರಿಂದ ಇದನ್ನು ಖಂಡಿತವಾಗಿಯೂ ಬದಲಾವಣೆ ಮಾಡಬೇಕಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಇಬ್ಬರು ಅಡ್ವೋಕೆಟ್ಸ್ ಸಾಕು ಎಂದು ಹೇಳಿದ್ದೀರಿ ಇದರಲ್ಲಿ ಒಬ್ಬರು ಸ್ತ್ರೀ ವಕೀಲರ ಮತ್ತೊಬ್ಬರು ಪುರುಷ ವಕೀಲರು ಇರುತ್ತಾರೆಂದು ಹೇಳಿದ್ದೀರಿ. ಅಧ್ಯಕ್ಷರ ಮುಖಾಂತರ ಮಾನ್ಯ ಕಾನೂನು ಮಂತ್ರಿಗಳವರಲ್ಲಿ ನಾನು ಕೇಳುತ್ತೇನೆ, ಸ್ವಾಮಿ, ಸುಮಾರು ೬ ಸಾವಿರ ಜನ ಇರತಕ್ಕ ಪುರಂಷರು ವಕೀಲರು ಇದ್ದಾರೆ. ಮತ್ತು ೫೦–೬೦ ಜನ ಇರತಕ್ಕ ಸ್ತ್ರೀ ವಕೀಲರಿದ್ದಾರೆ ಇದರಲ್ಲಿ ತಾವು ೧ : ೧ ಮಾಡಿದ್ದೀರಿ, ಇದು ಸರಿಯಲ್ಲ.

ಶ್ರೀಮತಿ ಎಸ್. ಪ್ರಮಿಳಾ.—ಯಾವ ಸ್ಟ್ಯಾಟಿಸ್ಟಿಕ್ಸ್ ಸ್ವಾಮಿ ಅದು ? ಪಾಪ್ಯುಲೇಷನ್ ೬೦ ಪರ್ಸೆಂಟ್ ಇದೆ.

(ಗೊಂದಲ)

ಶ್ರೀ ಪಿ ಎನ್. ರೆಡ್ಡಿ.—ಅವರು ಮಾತನಾಡುವಾಗ ಅರ್ಥ ಮಾಡಿಕೊಂಡು ಮಾತನಾಡುವುದಿಲ್ಲ. ಸುಮ್ಮ ಸುಮ್ಮನೇ ಮಾತಿನ ಮಧ್ಯದಲ್ಲಿ ಬಂದು ಏನು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ನಾನು ಹೇಳುತ್ತಿರುವುದನ್ನು ಪೂರ್ತಿ ಕೇಳಲಿಲ್ಲ ನಾನು ಸ್ತ್ರೀ ವಕೀಲರಿಗೆ ಕೊಡಬಾರದೆಂದು ಹೇಳಲಿಲ್ಲ.

ಶ್ರೀಮತಿ ಎಸ್. ಪ್ರಮೀಳಾ.—ಅಧ್ಯಕ್ಷರೇ, ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆಂದು ಹೇಳಿರತಕ್ಕದನ್ನು ಕಡತದಿಂದ ತೆಗೆದು ಹಾಕಿಸಬೇಕು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಮಧ್ಯೆ ಬಾಯಿ ಹಾಕಿ ಏತಕ್ಕೆ ಮಾತನಾಡಬೇಕು ಸ್ವಾಮಿ ? ತಪ್ಪು ಅಪ್ಪಣೆ ಪಡೆದು, ಮಾನ್ಯ ಸದಸ್ಯರನ್ನು ಕೂತುಕೊಳ್ಳುವುದಕ್ಕೆ ಬೇಡಿಕೊಂಡು ಅನಂತರ ಮಾತ ನಾಡಬೇಕು. ಅದನ್ನು ಬಿಟ್ಟು ಮಧ್ಯದಲ್ಲಿ ಬಾಯಿ ಹಾಕಿದರೆ ಹೇಗೆ ?

ಶ್ರೀ ಪಿ. ಎನ್. ರೆಡ್ಡಿ.—ನಾನು ಈಲ್ಡ್ ಆಗುತ್ತಿಲ್ಲ. ದಯವಿಟ್ಟು ಯಾರೂ ಮಧ್ಯದಲ್ಲಿ ಮಾತ ನಾಡಬೇಡಿ. ನಾನು ಏನು ಹೇಳುತ್ತಿದ್ದೆ ಎಂದರೆ ೬ ಸಾವಿರ ಇರತಕ್ಕ ಪುರುಷ ವಕೀಲರಿಗೆ ಒಂದೇ ಸ್ಥಾನವನ್ನು ಕೊಟ್ಟಿದ್ದೀರಿ ಅದಕ್ಕೆ ಬದಲು ಎರಡು ಮಾಡಿ ಸ್ತ್ರೀಯರಿಗೂ ಸಹ ಒಂದು ಸ್ಥಾನವನ್ನು ಕೊಡಿ ಎಂದು ಹೇಳುತ್ತಿದ್ದೇನೆ ಅವರಿಗೆ ಕೊಡುವುದು ಬೇಡವೆಂದು ನಾನು ಏನೂ ಹೇಳುತ್ತಿಲ್ಲ. ಅವ ರಿಗೆ ಒಂದು ಸ್ಥಾನ ಕೊಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ೬ ಸಾವಿರ ವಕೀಲರು ಇರತಕ್ಕಂಥ ಸಂದರ್ಭದಲ್ಲಿ ೧ ಸ್ಥಾನವನ್ನು ಪುರುಷರಿಗೂ ಮತ್ತು ಕೇವಲ ೫೦-೬೦ ಜನ ಇರತಕ್ಕ ಸ್ತ್ರೀ ವಕೀಲರಿಗೆ ಒಂದು ಸ್ಥಾನವನ್ನು ಕೊಟ್ಟರೆ ಅದು ಏನೇನೂ ಸರಿ ಹೋಗುವುದಿಲ್ಲವೆಂದು ನನ್ನ ಅಭಿಪ್ರಾಯ ಹೇಳುತ್ತಿದ್ದೆ ಅಷ್ಟರಲ್ಲಿಯೇ ಮಾನ್ಯ ಸದಸ್ಯೆಯವರು ಮಧ್ಯೆ ಪ್ರವೇಶಿಸಿ ಮಾತನಾಡಿದರು, ಆ ತರಹ ಮಾತನಾಡಿದರೆ ಅದು ಸರಿ ಹೋಗುವುದಿಲ್ಲ.

ಇನ್ನೊಂದು ವಿಷಯವೇನೆಂದರೆ ಹೋದ ಸಲ ಸಲಹಾ ಸಮಿತಿಯನ್ನು ಮಾಡಿದ್ದಾಗ ಕಾನೂ ನಿನ ಇಲಾಖೆಯ ಕಾರ್ಯದರ್ಶಿಯವರನ್ನೇ ಅದಕ್ಕೆ ಸೆಕ್ರೆಟರಿಯವರನ್ನಾಗಿ ನೇಮಕ ಮಾಡಿದ್ದರು. ಆದರೆ ಈ ಸಾರಿ ..Secretary to be appointed by the Board'' ಎಂದು ಹೇಳಿದ್ದೀರಿ. ಅಂದರೆ ಅರ್ಥವೇನು ಸ್ವಾಮಿ ? ಇದರಲ್ಲಿ ಬಹಳ ಮುಖ್ಯವಾದ ಕೆಲಸವೆಂದರೆ ಕಾರ್ಯದರ್ಶಿಯವರದೇ, ಅವರದೇ ಹೆಚ್ಚಿನ ಜವಾಬ್ದಾರಿ ಇದೆ ಅಂಥಾ ಜಾಗಕ್ಕೆ ಐ. ಎ. ಎಸ್. ಆಫೀಸರ್‌ರವರನ್ನೋ ಅಥವಾ ಡಿಸ್ಟ್ರಿಕ್ಟ್ ಜಡ್ಜ್‌ರವರನ್ನೋ ಹಾಕುತ್ತಿದ್ದೀರಿ. ಇದರಿಂದ ನಮಗೆ ಸ್ವಲ್ಪ ಅನುಮಾನವಾಗುತ್ತಿದೆ. ಇದನ್ನು ಕ್ಲಿಯರ್ ಮಾಡುವ ದಿಶೆಯಿಂದ ವಿಶದವಾಗಿ ಹೇಳಬೇಕಾಗುತ್ತದೆ. Either you should mention, an I A S officer to be the Secretry or the District Judge or the Civil Judge Cadre'' ಯಾರನ್ನು ಸೆಕ್ರೆಟರಿಯವರನ್ನಾಗಿ ಹಾಕುತ್ತೀರಿ ಎನ್ನುವ ಬಗ್ಗೆ ಕ್ಲಿಯರ್ ಆಗಿ ಇದರಲ್ಲಿ ಬರೆಯಲೇ ಬೇಕಾಗುತ್ತದೆ. ಜೊತೆಗೆ ಇಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಸೆಕ್ಷನ್ ೧೭ ರಲ್ಲಿ...'' Special provision in scheme regarding certain cate gories of person...'' ಎಂದು ಹೇಳಿದ್ದೀರಿ. ಹಿಂದೆ ಏನು ಇತ್ತು ಎಂದರೆ ಈ ಕಾನೂನು ಸಲಹಾ ಸಮಿತಿಯಲ್ಲಿ. ಆರ್ಟಿಕಲ್ ೩೯ ರ ಪ್ರಕಾರ ಪ್ರತಿಯೊಬ್ಬರಿಗೂ ಫ್ರೀ ಲೀಗಲ್ ಏಡ್‌ನ್ನು ಆರ್ಥಿಕ ವಾಗಿ ಯಾರು ಹಿಂದುಳಿದಿರುತ್ತಾರೋ ಅವರಿಗೆಲ್ಲಾ ಕೊಡಬೇಕೆಂದು ಇತ್ತು ಅದನ್ನು ಅನುಸರಿಸುತ್ತಿ ದ್ದರು. ಯಾರಿಗೆ ೪೫೦೦ ರೂ. ಗಳಿಗಿಂತ ವಾರ್ಷಿಕವಾಗಿ ಉತ್ಪನ ಕಡಿಮೆ ಇರುತ್ತದೆಯೊ ಅವರಿಗೆಲ್ಲಾ ಕಾನೂನಿನ ಉಚಿತ ನೆರವನ್ನು ಕೊಡಬೇಕೆಂದು ಇತ್ತು. ಅದೇ ರೀತಿ ನೀವು ಮಾಡಿದ್ದರೆ ಆಗಿತ್ತು ಇಂಥಾ ಶಬ್ದಗಳನ್ನೆಲ್ಲಾ ಬರೆಯುವಂಥಾ ಅವಶ್ಯಕತೆಯಾದರೂ ಏನಿತ್ತು ?

SRI Y. RAMAKRISHNA.—Just to clear the confusion, I would like the Hon. Member to see sub-section (d) on page 13:

> ''(d) the circumstances in which and the conditions subject to which legal aid shall be made available''

The Board may fix any amount celling when legal aid should be extended. Secondly Section 17 it has been copied from the report from Bhagavathi and Krishna Iyer. I have not changed anything.

ಶ್ರೀ ಪಿ. ಎನ್. ರೆಡ್ಡಿ.—ನಾನು ಅಧ್ಯಕ್ಷರ ಮುಖಾಂತರ ಹೇಳುವುದೇನೆಂದರೆ, Article 39 (A) of the Constitution. ಕ್ಲಿಯರ್ ಆಗಿದೆ.

"The State shall secure that the operation of the legal system promotes justice, on a basis of equal opportunity, and shall in particular, provide free legal aid, by suitable legislation or scheme or in any other way, to ensure that opportunities for securing justice are not denied to any citizen by reason of economic or other disabilities.

ಬೇರೆಯವರು ಸಹ ಅಪೀಲ್ ಹೋಗಬಹುದು, ಆದರೆ ಪರಿಜನರು ಅಪೀಲ್ ಹಾಕಿ ಕೊಳ್ಳಲು ಅವರಿಗೆ ಮಾತ್ರ ಇನ್‌ಕಂ ಫಿಕ್ಸ್ ಮಾಡಬೇಡಿ. ಆರ್ಟಿಕಲ್ ೩೯ (ಎ) ಪ್ರಕಾರ ಎಲ್ಲರಿಗೂ ಕಾನೂನು ನೆರವು ಕೊಡಲೇಬೇಕಾಗುತ್ತದೆ. ಏಕೆಂದರೆ ಆಕಸ್ಮಾತ್ ಮುಂದೆ ಯಾರಾದರೂ ಹೋಗಬಹುದು.

SRI Y. RAMAKRISHNA.—Please look t e word, 'due regard...'

ಶ್ರೀ ಪಿ ಎನ್. ರೆಡ್ಡಿ.—ಈ ಕ್ಲಾಜ್ ಬೇಕಾಗಿರಲಿಲ್ಲ. Subject to their economic conditions ಎಂದು ಹಾಕಿಕೊಟ್ಟಿದ್ದರೆ ಸಾಕಾಗಿತ್ತು. Scheduled caste persons are exempted.. ಎಂದು ಹಾಕಿದ್ದರೆ ಸಾಕಾಗುತ್ತಿತ್ತು. ಇದನ್ನು ಸ್ವಲ್ಪ ತಾವು ಆಲೋಚನೆ ಮಾಡಿ. ಇನ್ನು ನನಗೆ ನಿಮ್ಮ ಆಕ್ಟ್ ಪ್ರಕಾರ ಬೋರ್ಡಿಗೆ ಪೂರ್ತಿ ದುಡು ಕೊಟ್ಟ ಹಾಗೆ ಕಾಣುತ್ತದೆ. ಹಿಂದೆ ಒಂದು ಪೈಸೆಗಾದರೂ ಕೂಡ ವಿಧಾನ ಸೌಧಕ್ಕೆ ಅಪ್ರೂವಲ್‌ಗಾಗಿ ಬರಬೇಕಾಗಿತ್ತು. ಪರಿಸ್ಥಿತಿ ಹೀಗಿದ್ದಾಗ ಲೀಗಲ್ ಆಗಿ ಕೊಡುವುದಕ್ಕಾಗುವುದಿಲ್ಲ. ಆದಕಾರಣ, ಇಲ್ಲಿ ಒಂದು ಸೆಕ್ಷನ್ ಹಾಕಿದ್ದರೆ ಚೆನ್ನಾಗಿರುತಿತ್ತು. ಎರಡನೆಯದಾಗಿ, ರೂಲ್ಸನ್ನು ಅಪ್ರೂವ್ ಮಾಡಬೇಕಾದರೆ ಸರ್ಕಾರದವರು ಅಪ್ರೂವ್ ಮಾಡಬೇಕಾಗುತ್ತದೆ. ರೂಲ್ಸ್‌ನಲ್ಲಿ ವಕೀಲರಿಗೆ ಪೆಡಚಣೆ ಬರಬಹುದು. ವಕೀಲರಿಗೆ ಪೆರುಲು ಶೇಕಡ ೫೦ ರಷ್ಟಾದರೂ ಹಣ ಕೊಡದಿದ್ದರೆ ಉಚಿತ ಕಾನೂನು ನೆರವು ದೊರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ೨-೩ ವರ್ಷಗಳಾದರೂ ಒಂದೊಂದು ಕೇಸು ಮುಂಗಿಯಲಾರದ ಕಥೆಯಾಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ನಾವು ವಕೀಲರಿಗೆ ಕೊಡಬೇಕ್ಕ ೧೫೦ ರೂಪಾಯಿ ಹಣ ಅವರಿಗೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಆದನ್ನು ಪಡೆದು ಅವರು ಮಾನುಲು ಮನುಷ್ಯನಿಗೆ ಕಾನೂನು ನೆರವು ಕೊಡಬೇಕಾಗುತ್ತದೆ. ಆದ್ದರಿಂದ, ವಕೀಲರಿಗೆ ಕೊನೇ ಪಕ್ಷ ಶೇಕಡ ೫೦ರಷ್ಟಾದರೂ ಕೊಟ್ಟರೆ ಅವರಿಗೆ ಒಂದು ರೀತಿಯ ಸಮಾಧಾನವಾಗುತ್ತದೆಂದು ಹೇಳಬಯಸುತ್ತೇನೆ. ಹಿಂದೆ ವಕೀಲರಿಗೆ ದುಡ್ಡು ಕೊಡುತ್ತಿರಲಿಲ್ಲ ; ಜಡ್ಜ್‌ಮೆಂಟ್ ಕಾಪಿಯನ್ನು ಕೊಟ್ಟವರಿಗೆ ಕೂಡ ಕೂಡುತ್ತಿರಲಿಲ್ಲ. ಆ ರೀತಿಯಾದರೆ ವ್ಯವಹಾರ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಡಿಕ್ರಿ ಸ್ಯೂಟ್ ಮಾಡುವುದಕ್ಕೆ ಪ್ರಾವಿಷನ್ ಹಾಕಿದ್ದೀರಿ. ಒಂದು ವೇಳೆ ವಕೀಲರು ದುಡ್ಡು ಕೂಟ್ಟು ಕೇಸ್ ನಡೆಸುತ್ತಿದ್ದರೆ ಅವರ ಮೇಲೆ ಕಾನೂನು ರೀತಿ ಕ್ರಮ ತೆಗೆದು ಕೊಳ್ಳಬಹುದು, ಅಥವಾ ಕೋರ್ಟಿಗೆ ಹಾಕಿಕೊಳ್ಳಬಹುದು. ಅಥವಾ ಬಾರ್ ಕೌನ್ಸಿಲ್ಲಿಗೆ ಹಾಕಿ ಕ್ರಮ ತೆಗೆದುಕೊಳ್ಳಬಹುದು ಅದುದರಿಂದ, ಈ ಬಗ್ಗೆ ತಾವೇನಾದರೂ ರೂಲ್ಸ್‌ನಲ್ಲಿ ಬದಲಾವಣೆ ಮಾಡಿದರೆ ಇಲ್ಲಿ ಅವಕಾಶ ಕೊಡಬೇಕಾಗುತ್ತದೆ. ಇನ್ನು ಎಕ್ಸಿಕ್ಯೂಟೀವ್ ಕಮಿಟಿಯಲ್ಲಿ ಇಬ್ಬರು ನಾನ್ ಆಫಿಷಿಯಲ್ ಸದಸ್ಯರನ್ನು ಹಾಕಿದ್ದೀರಿ, ಅವರ ಸಂಖ್ಯೆ ಕಡಿಮೆ ಇದ್ದರೆ ನಿಮ್ಮ ಕೆಲಸ ನಡೆಯುವುದಿಲ್ಲ. ಆ ಸಮಿತಿಯ ಅಧ್ಯಕ್ಷರನ್ನು ಕೂಡ ನಾನ್ ಆಫಿಷಿಯಲ್ ಆನ್ನೇ ಹಾಕಿದರೆ ಒಳ್ಳೆಯದು. ಯಾರಾದರೂ ಒಬ್ಬರು ನಾನ್ ಆಫಿಷಿಯಲ್ ಮೆಂಬರ್ ಎಕ್ಸಿಕ್ಯೂಟೀವ್ ಕಮಿಟಿಯ ಅಧ್ಯಕ್ಷರಾಗಬಹುದೆಂದು ಇದ್ದರೆ ನಾನು ಅದನ್ನು ಸ್ವಾಗತಿಸುತ್ತಿದ್ದೆ. ಆದರೆ ನೀವು ಆ ರೀತಿ ಎಲ್ಲಿಯೂ ಹೇಳಿಲ್ಲ. ಎರಡನೆಯದಾಗಿ, ಆ ಸಮಿತಿಯಲ್ಲಿ ಕಾನೂನು ಇಲಾಖೆಯ ಕಾರ್ಯದರ್ಶಿಯವರಾಗಲಿ ಆಥವಾ ಪಣಕಾಸಿನ ಇಲಾಖೆಯ ಕಾರ್ಯದರ್ಶಿಯವರಾಗಲಿ ಇರುತ್ತಾರೆ. ಇಬ್ಬರು ನಾನ್ ಆಫಿಷಿಯಲ್ ಮೆಂಬರ್ಸ್ ಮತ್ತು ಒಬ್ಬರು ಆಫಿಷಿ

ಯಲ್ ಮೆಂಬರ್ (ಜೋರ್ಡಿನ ಸೆಕ್ರೆಟರಿ) ಇರುವುದರಿಂದ ಆವರಿಂದ ಇವರಿಗೆ ಅಡಚಣೆ ಬರುತ್ತದೆ. ಸಮಿತಿಯಲ್ಲಿ ನಾನ್ ಆಫಿಷಿಯಲ್ ಮೆಂಬರ್ ಹೆಚ್ಚಾಗಿದ್ದರೆ ಮಾಮೂಲು ಮನುಷ್ಯರ ಕಷ್ಟ-ಸುಖಗಳನ್ನು ಚೆನ್ನಾಗಿ ಅರಿತುಕೊಂಡು ಕೆಲಸ ಮಾಡುತ್ತಾರೆ. ಒಂದು ವೇಳೆ ಅಧಿಕಾರಿಗಳೇ ಇದ್ದರೆ ಅವರಿಗೆ ಪ್ರಚಾರ ಮಾಡುವುದಕ್ಕಾಗಲೀ ಅಥವಾ ಜನಸಾಮಾನ್ಯರೊಡನೆ ಮಾತನಾಡುವುದಕ್ಕಾಗಲೀ ತಿಳಿವುದಿಲ್ಲ. ಆ ಸಮಿತಿಯಲ್ಲಿ ಒಬ್ಬರನ್ನಾದರೂ ಪೆಡ್ಡೊಲ್ಡ್ ಕ್ಯಾಸ್ಟ್ ನಾನ್ ಆಫಿಷಿಯಲ್ ಮೆಂಬರನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಸಮಿತಿಯಲ್ಲಿ ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚಿಸಿ ಒಟ್ಟು ೪ ಜನವೂ ನಾನ್ ಆಫಿಷಿಯಲ್ ಮೆಂಬರ್ಸ್ ಇರುವಂತೆ ಮಾಡಬೇಕೆಂದೂ ಹಾಗೂ ಆ ಪೈಕಿ ಒಬ್ಬರು ಹರಿಜನ ಸದಸ್ಯರು ಇರಬೇಕೆಂದು ಒತ್ತಾಯ ಮಾಡುತ್ತೇನೆ. ಇದಕ್ಕೆಲ್ಲ ಎಷ್ಟೆಷ್ಟು ಪ್ರಯಾಸ ಪಡಲಾಗಿದೆ ಎಂಬುದು ನನಗೆ ಗೊತ್ತಿದೆ. ಇಷ್ಟೆಲ್ಲ ಪ್ರಯಾಸಪಟ್ಟರೂ ಸಫಲವಾಗಲಿಲ್ಲವೆಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸುಮಾರು ೭-೮ ವರ್ಷಗಳಿಂದ ಪ್ರಯತ್ನಪಟ್ಟರೂ ಜನತೆಗೆ ಕಾನೂನಿನ ನೆರವು ಸರಿಯಾಗಿ ಮುಟ್ಟುತ್ತಿಲ್ಲ. ಇದು ಜನಕ್ಕೂ ಮುಟ್ಟುತ್ತಿಲ್ಲ ಪಂಚರು, ವಕೀಲರಿಗೂ ಮುಟ್ಟುತ್ತಿಲ್ಲ. ಆದುದರಿಂದ ಈ ಸಮಿತಿಯಲ್ಲಿ ಅದಷ್ಟು ಮಟ್ಟಿಗೆ ನಾನ್ ಆಫಿಷಿಯಲ್ ಮೆಂಬರ್ಸ್, ಅನ್ನೇ ಹಾಕಿ ಅವರಿಗೆ ಪೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಎಕ್ಸಿಕ್ಯೂಟೀವ್ ಕಮಿಟಿಯು ಛೇರ್ಮನ್ ಅನ್ನು ಕೂಡ ನಾನ್ ಆಫಿಷಿಯಲ್ ಅನ್ನೇ ಮಾಡಿ ಎಂದು ಹೇಳುತ್ತೇನೆ. ಕಾರ್ಯದರ್ಶಿಯವರನ್ನು ಜಿಲ್ಲಾ ನ್ಯಾಯಾಧೀಶರ ಕೇಡರ್‌ನವರನ್ನಾದರೂ ಹಾಕಬೇಕು. ಇಲ್ಲದಿದ್ದರೆ ಐಎಎಸ್ ಅಧಿಕಾರಿಯನ್ನಾದರೂ ಹಾಕಿ. ಇದನ್ನೆಲ್ಲ ತಾವು ಕ್ಲೀಯರ್ ಆಗಿ ಹೇಳಬೇಕು, ಇಲ್ಲದಿದ್ದರೆ ಬಹಳ ತಾಪತ್ರಯವಾಗುತ್ತದೆ. ಪಬ್ಲಿಸಿಟಿಯ ಸಲುವಾಗಿ ಒಂದು ಸೆಕ್ಷನ್ ಅನ್ನು ಹಾಕಿ ಒಬ್ಬರನ್ನು ಪಬ್ಲಿಸಿಟಿ ಇನ್‌ಚಾರ್ಜ್ ಮಾಡದೆ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಒಂದು ಕಾರ್ಯವನ್ನು ಇಡೀ ಭಾರತದಲ್ಲೇ ನಾವು ಪ್ರಥಮ ಬಾರಿಗೆ ಮಾಡುತ್ತಿದ್ದೇವೆಂದು ಹೇಳುತ್ತಿರುವಾಗ ಇದು ತುಂಬ ಯಶಸ್ವಿಯಾಗಿ ನಡೆಯಬೇಕು. ನಾನು ಇತ್ತೀಚೆಗೆ ಒಂದು ಮೀಟಿಂಗ್‌ನಲ್ಲಿ ಭಾಗಿಯಾಗಿದ್ದಾಗ ಅದರ ಸಮಾಚಾರ ನನಗೆ ಗೊತ್ತೇ ಇಲ್ಲವೆಂದು ಹೇಳುತ್ತಿದ್ದರು. ಏಕೆಂದರೆ ಇದು ಅಷ್ಟಾಗಿ ಪ್ರಚಾರವಾಗಿಲ್ಲ. ಇದು ಸರಿಯಾಗಿ ಪ್ರಚಾರವಾಗದಿದ್ದರೆ ಕಾರ್ಯಕ್ರಮ ಕಿನ್ನಾಗಿ ನಡೆಯುವುದಿಲ್ಲ. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವ ಸಲುವಾಗಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡು, ಪಂಚಾಯಿತಿ ಹಾಗೂ ಸೊಸೈಟಿಗಳು ಉಪಯೋಗಿಸಬೇಕಾದರೆ ರೂರಲ್ ಡೆವಲಪ್‌ಮೆಂಟ್ ಬೋರ್ಡ್ ಕಡೆಯಿಂದ ಎಫಿಷಿಯೆಂಟ್ ಮೆಂಬರ್ ಅನ್ನು ಹಾಕಿಕೊಳ್ಳಿ, ಒಂದು ಹೆಚ್ಚಾದರೂ ಪ್ರಯಾಸವಾಗಿಲ್ಲ. ಆ ರೀತಿ ತಾವು ಮಾಡುತ್ತೀರೆಂದು ನಂಬಿ, ತಾನು ಕೊಟ್ಟಿರತಕ್ಕ ಕೆಲವು ಸಲಹೆಗಳನ್ನು ನ್ಯಾಯ ಕಾನೂನು ಮಂತ್ರಿಗಳು ಒಪ್ಪಬಹುದೆಂದು ಆಶಿಸಿ, ಈ ಒಂದು ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಅವರ ಕಾಲದಲ್ಲಿ ತಂದಿರುವುದು ಸಂತೋಷವೆಂದು ಹೇಳುತ್ತಾ ಇದನ್ನು ಮಾನ್ಯ ಶಾಸಕರೆಲ್ಲರು ಒಪ್ಪಿ ಈ ಒಂದು ಕಾರ್ಯಕ್ರಮಕ್ಕೆ ನೆರವಾಗಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

SRI A. LAKSHMISAGAR (Chickpet).—Mr. Chairman Sir, the Hon'ble Minister in a refreshingly objective manner has made clear all the salient features of the Bill which he is piloting. I only touch upon two or three points. One is, in regard to constitution of several committees, too much of nomination element is introduced. It can be either used for a good purpose or for a bad purpose. My only caution is, let these committees be backed by men of the Minister's choice or his party itself. But the very purpose of this Bill is likely to be defeated the moment these committees are not properly and purposefully constituted. Therefore, the committee should be constituted with men of dedication and integrity and people who are committed to the Philosophy of free legal aid. I have gone through the various clauses of the Bill at great length. I have spent several

hours to discover for myself the salient features of it. This Bill is coming up for the first time and the idea of constituting the Board is being done for the first time. Secondly, the most important point that the Board has to perform is indicated in clauses (d), (e) and (f) of Clause (16) in the Bill. In sub-clause (d) and (e) it is stated.—

> "(d) the circumstances in which and the conditions subject to which legal aid shall be made available.
>
> (e) the form and manner in which and the authority to which application for availing of the benefits thereunder shall be made."

Sir, here the manner and the method of availing the legal aid is most important. Then Sir, the most important aspect of the Bill is to determine the aid that is to be given to the needy persons. This is a most important function. Now the scheme is to be framed and it is only an enabling provision that is provided for under the Bill, This is the most important part that the Board has got to perform. Often times in practice it is difficult to lay down the norms according to which the legal aid is to be rendered to the needy persons. It is a very difficult task. But all the same, when a scheme is adumberated, it is incumbent on the persons to implement the philosophy of this scheme of legal aid to formulate rules and regulations and to see that the persons who are in real legal aid get that aid. This is most important. Sri J.H. Patel has already touched upon other clauses, namely, persons, that is, the Advocates whom you are going to employ for the purpose of rendering legal aid for needy persons. That is also an equally important element in the scheme of free legal aid. Often times complaints are received of the manner in which these persons not exactly in one place but in places where Government have to render aid and assistance. So, even in choosing Advocates for the purpose of rendering legal aid, such advocates as are committed to the philosophy of free legal aid must be chosen. It is not an impossible task, but it requires a degree of insight into the selection of these Advocates. Some years ago, Mr. Chairman, I advertised in the Bar Association to render free legal aid. As an Advocate I am not supposed to advertise. I am prohibited under the provisions of the Advocates' Act to give advertisement that here I am rendering free legal aid. I cannot do so. But as an individual I made it known to several persons in Bangalore that I am prepared to undertake free legal aid. Nobody came to me. May be, they might have thought that I was a person not capable of delivering the goods so far as needy persons are concerned. Therefore, the effectiveness with which the free legal aid is provided is another important aspect of the

matter and care must be taken to see that people who are committed to the philosophy of rendering free legal aid are choosen.

Lastly, Sir, how will the scheme function? It is too early to say how exactly it is going to function, Anyhow this is a maiden effort on the part of the Government of Karnataka in the right direction. I wish that the objectives of the Bill are completely brought out into effect and real assistance rendered to the persons in need of free legal aid.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ತಂದಿರತಕ್ಕ ಉಚಿತ ಕಾನೂನು ನೆರವಿನ ಮಸೂದೆಯನ್ನು ಸ್ವಾಗತಿಸುತ್ತಾ, ಸಾಮಾಜಿಕ ನ್ಯಾಯವನ್ನು ದೊರಕಿಸುವ ದಿಕ್ಕಿನಲ್ಲಿ ಇದೊಂದು ಒಳ್ಳೆಯ ಪ್ರಯತ್ನವೆಂದು ಹೇಳ ಬಯಸುತ್ತೇನೆ. ಪಟ್ಟಭದ್ರ ಹಿತಾಸಕ್ತಿಗಳಿಂದ ತುಂಬಿರತಕ್ಕ ಈ ಸಮಾಜದಲ್ಲಿ ಬಡವರನ್ನು ಹತ್ತಿಕ್ಕಬೇಕೆಂದು ಮತ್ತು ದುರ್ಬಲ ವರ್ಗಗಳನ್ನು ಸದೆ ಬಡಿಯಬೇಕೆಂದು ಹೇಳುವ ವರ್ಗಗಳುಂಟು. ಆ ವರ್ಗಗಳ ಕರಾಳ ಶಕ್ತಿಯನ್ನು ಹತ್ತಿಕ್ಕಿ ಸಮಾಜದಲ್ಲಿರುವ ಬಡವರಿಗೆ ಮತ್ತು ದುರ್ಬಲ ವರ್ಗದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಈ ಮಸೂದೆಯ ಕೆಲವು ಕಲಂಗಳು ಅವರ ನೆರವಿಗೆ ಧಾವಿಸಿ ಬರುತ್ತವೆ. ಈ ಶಕ್ತಿ ಬಗ್ಗೆ ಮಾನ್ಯ ಸಚಿವರು ಮಸೂದೆಯಲ್ಲಿ ತಿಳಿಸಿದ್ದಾರೆ. ಸಮಾಜದಲ್ಲಿರುವ ಬಡವರಿಗೆ ಮತ್ತು ದುರ್ಬಲ ವರ್ಗದವರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ಉದ್ದೇಶದಿಂದ ಕಾನೂನು ನೆರವಿನ ಸಂಸ್ಥೆಯನ್ನು ಸ್ಥಾಪಿಸಿದ್ದರೂ ಅದು ಕಳೆದ ನಾಲ್ಕು ವರ್ಷಗಳಿಂದ ಸಾಕಷ್ಟು ಚೆನ್ನಾಗಿ ಕೆಲಸ ಮಾಡಲಿಲ್ಲ ಈ ಸಂಸ್ಥೆಗೆ ಒದಗಿಸಿದ್ದ ಐವತ್ತು ಲಕ್ಷ ರೂಪಾಯಿಗಳಲ್ಲಿ ನಾಲ್ಕು ಲಕ್ಷ ರೂಪಾಯಿಗಳು ಸರ್ಕಾರಕ್ಕೆ ವಾಪಸ್ಸು ಹೋಗಿದೆ ಎಂದು ಮಾನ್ಯ ಪಿ. ಎನ್. ರೆಡ್ಡಿಯವರು ಹೇಳಿದ್ದಾರೆ. ಇದು ನಿಜಕ್ಕೂ ಶೋಚನೀಯವಾದುದೆಂದು ಹೇಳುತ್ತೇನೆ. ಅಲ್ಲದೆ, ಒಂದೊಂದು ಜಿಲ್ಲೆಯಲ್ಲಿ ಕೇವಲ ಎಂಟು ಮೊಕದ್ದಮೆಗಳು ಬಂದವು. ಹತ್ತು ಮೊಕದ್ದಮೆಗಳು ಬಂದವು. ಮಂಡ್ಯ ಜಿಲ್ಲೆಯಲ್ಲಿ ಹದಿನೈದು ಮೊಕದ್ದಮೆಗಳು ಬಂದವು. ಎಂದರೆ ಈ ಸಂಸ್ಥೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಮತ್ತು ಇದು ತನ್ನ ಕಾರ್ಯವನ್ನು ಸರಿಯಾಗಿ ಆನುಷ್ಠಾನಕ್ಕೆ ತರುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ, ಇವತ್ತಿನ ದಿವಸ ಸಮಾಜದಲ್ಲಿ ದುರ್ಬಲ ವರ್ಗದವರ ಬಗ್ಗೆ ಕಳಕಳಿ, ಅನುಕಂಪ ಮತ್ತು ಸಹಾನುಭೂತಿ ಇರತಕ್ಕ ಜನರನ್ನು ಈ ಸಂಸ್ಥೆಗೆ ಹಾಕಿ, ಅವರು ಹೆಚ್ಚು ಪ್ರಜ್ಞೆಯಿಂದ ಬಡವರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮತ್ತು ಅವರಿಗೆ ಅನ್ಯಾಯವಾದಾಗ ಅವರ ನೆರವಿಗೆ ಹೋಗುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ.

ಈ ಸಂಸ್ಥೆಯಲ್ಲಿ ಸುಮಾರು ಎಂಟು ಜನ ಅಧಿಕಾರಿಗಳನ್ನು, ಇಬ್ಬರು ವಕೀಲರನ್ನು ಮತ್ತು ಎಂಟು ಜನ ಅಧಿಕಾರೇತರರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಹೀಗೆ ಮಾಡಿರುವುದರಿಂದ ಅಧಿಕಾರೇತರರು ಅಧಿಕಾರಿಗಳ ಯಾವುದೋ ಒಂದು ವರ್ತನೆಯಲ್ಲಿ ಕೆಲಸ ಮಾಡುವಂತೆ ಮಾಡಲಾಗಿದೆ ಎಂದು ಕಾಣುತ್ತದೆ. ಎಕ್ಸಿಕ್ಯುಟೀವ್‌ಗೆ ಬಂದಾಗಲೂ, ಅಲ್ಲಿ ಮೂರು ಜನ ಅಧಿಕಾರಿಗಳಿದ್ದಾರೆ. ಇಬ್ಬರು ಅಧಿಕಾರೇತರ ಸದಸ್ಯರಾಗಿದ್ದಾರೆ. ಅಂದರೆ, ಅಧಿಕಾರಿಗಳ ಕೈ ಮೇಲಾಗುತ್ತದೆ. ಆದುದರಿಂದ, ಇನ್ನೂ ಒಬ್ಬರು ಅಥವಾ ಇಬ್ಬರು ಅಧಿಕಾರೇತರರನ್ನು ಅದರಲ್ಲಿ ಹಾಕಿ. ಅಧಿಕಾರೇತರರ ಶಕ್ತಿಯನ್ನು ಹೆಚ್ಚಿಸಬೇಕು. ಆಗ ಅವರು ತಮ್ಮದೇ ಆದ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡು ದುರ್ಬಲರಿಗೆ ಮತ್ತು ದೀನ ದಲಿತರಿಗೆ ಹೆಚ್ಚಿನ ನೆರವು ನೀಡುತ್ತಾರೆನ್ನುವುದು ನನ್ನ ಭಾವನೆ.

ಖಿ–೩೦ ಪಿ.ಎಂ.

ಉದ್ದೇಶ ಬಹಳ ಒಳ್ಳೆಯದು. ಬೋರ್ಡಿಗೆ ಕೊಟ್ಟರತಕ್ಕ ಅಧಿಕಾರವೂ ಒಳ್ಳೆಯದು ಇದೆ. ಆದರೆ, ತ್ವರಿತಗತಿಯಿಂದ ಚಾಕಚಕ್ಯತೆಯಿಂದ ಬಡವರ ನೆರವಿಗೆ, ಎಲ್ಲ ಜಾತೀಯ ಬಡವರ ನೆರವಿಗೆ ಇದು ಬರಬೇಕು. ಇದು ಅನುಷ್ಠಾನದಲ್ಲಿ ಕಂಡರೆ ಬಡವರಿಗೆ ವರ ಪ್ರಸಾದವಾಗುತ್ತದೆ. ಬಡವರ

ಬಗ್ಗೆ ಕಾನೂನು ನೆರವು ಇದೆ. ಇದರಿಂದ ಬಡವರಿಗೆ ಸಹಾಯವಾಗಬಹುದೆಂಬುದನ್ನು ತಾಲ್ಲೂಕು ಬೋರ್ಡುಗಳ ಮೂಲಕ, ವಿವಿಧ ಅಂಶಗಳ ಕಾರ್ಯಕ್ರಮಗಳ ಮೂಲಕ ಪ್ರಚಾರ ಮಾಡಿಸಬೇಕು. ಸಮಾಜದ ದುರ್ಬಲರಿಗೆ ಉಚಿತ ಕಾನೂನಿನ ನೆರವು ಇದೆ ಎಂಬುದನ್ನು ಸಾಮಾನ್ಯ ಜನರಿಗೆ ತಿಳುವಳಿಕೆ ಕೊಡಬೇಕು. ಈ ರೀತಿ ಮಾಡುವುದಾದರೆ, ಸಂಪೂರ್ಣವಾದ ಯಶಸ್ಸು ದೊರೆಯುತ್ತೆ. ಇಲ್ಲದೇ ಇದ್ದರೆ, ಇದು ಸಂಪೂರ್ಣವಾಗಿ ವಿಫಲವಾಗುತ್ತದೆ. ಕೇವಲ ಒಂದು ಪುಸ್ತಕ ರೂಪವಾಗಿ, ಕೆಲಸಕ್ಕೆ ಬಾರದ ಕಾಗದ ವಾಗಿ ಬಿದ್ದಿರುತ್ತದೆಂದು ನನ್ನ ಭಾವನೆ. ಚೆನ್ನಾಗಿ ಕೆಲಸ ಮಾಡುವಂತ ಒಳ್ಳೆಯ ಅಧಿಕಾರಿಗಳನ್ನು ಈ ಬೋರ್ಡಿನಲ್ಲಿ ಹಾಕಿ ಎಂದು ಕಳಕಳಿಯಿಂದ ಪ್ರಾರ್ಥಿಸಿಕೊಂಡು. ಈ ಧೇಯಕವನ್ನು ಸ್ವಾಗತಿಸುತ್ತೇನೆ. ಅದೇ ರೀತಿ ಈ ಮನೆಯಂ ಎಲ್ಲ ಸದಸ್ಯರು ಒಕ್ಕೊರಲಿನಿಂದ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ರಾಬರ್ಟ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಲೀಗಲ್ ಎಯಿಡ್ ಬೋರ್ಡು ಅನ್ನುವುದಕ್ಕೆ ಬದಲಾಗಿ, ಲೀಗಲ್ ಎಯಿಡ್ ಕೋ ಆರ್ಡಿನೇಷನ್ ಬೋರ್ಡು ಎಂದು ಮಾಡಿದರೆ ಯುಕ್ತವಾಗಿತ್ತೆಂದು ನನ್ನ ಮನಸ್ಸಿಗೆ ಅನಿಸುತ್ತೆ. ಏಕೆಂದರೆ, directly the Board does not render any aid to concerned parties. It is only co-ordinating.

ಇದು ಉಡುಪಿಯಲ್ಲಿ ಪಾರುಪಥ್ಯ ಮಾಡಿದ ಹಾಗೆ. ಉಡುಪಿ ಮತದ ಪಾರುಪಥ್ಯ ಇದ್ದ ಹಾಗೆ. Class 14 says thus :

> "Objects of the Board.—The objects of the Board shall be—
>
> (a) to stimulate, guide, propagate and organise legal aid and to evolve schemes for the purpose of making such aid available in accordance with the provisions made by or under this Act ;
>
> (b) to co-ordinate the working of the legal aid organisations and other organisations rendering legal aid whether constituted by or under this Act or not ;
>
> (c) to utilise the funds etc....."

ಇದನ್ನು ರೂಢರ್ ಲೀಗಲ್ ಎಯಿಡ್ ಬೋರ್ಡು ಎಂದು ಹೇಳಿದ್ದರೆ ಅರ್ಥವಾಗುತ್ತಿತ್ತು. ಅದಕ್ಕಾಗಿ ನಾನು ಹೇಳುವುದು. ಸಮ್ಮನೆ ಟೈಟಲ್ ಮಿಸ್‌ಲೀಡಿಂಗ್. ಅದನ್ನು ಬದಲಾಯಿಸಿ ಇದಕ್ಕೆ ಲೀಗಲ್ ಎಯಿಡ್ ಕೋ ಆರ್ಡಿನೇಷನ್ ಕಮಿಟಿ ಎಂದು ಬದಲಾಯಿಸಬೇಕೆಂದು ನನ್ನ ಸಲಹೆ. ಆಮೇಲೆ. ಕ್ಲಾಸ್ (೨೧) ರಲ್ಲಿ ಲೀಗಲ್ ಎಯಿಡ್ ಪಡೆದಂತ ವ್ಯಕ್ತಿ. ಕೇಸು ಅವನ ಕಡೆ ಆಯಿತೆಂದರೆ, ಆಗ ಎದುರು ಕಡೆಯಿಂದ ಕಾಸ್ಟ್ ಕೊಡಬೇಕೆಂದು ತೀರ್ಪು ಆದರೆ automatically it becomes the property and fund of the board. ಇವನೇ ಕಾಸ್ಟ್ ಕೊಡಬೇಕೆಂದರೆ ಗತಿ ಏನು? ಬಡವ, ವೀಕರ್ ಸೆಕ್ಷನ್ ಅಂತ ಹೇಳ್ದಿರಿ. ಅವನಿಗೆ ಕಾಸ್ಟ್ ಸಿಗಬೇಕಾದರೆ ಏನು ಮಾಡಬೇಕು? ಅವನೇ ಕಾಸ್ಟ್ ಕೊಡಬೇಕು. ಅವನಿಗೆ ಭದ್ರತೆ, ಜಾಮೀನು ಕೊಡುತ್ತೀರಾ? ಅದಕ್ಕಾಗಿ ಪ್ರಾವಿಷನ್ ಮಾಡಿ ಎಂದು ಹೇಳುತ್ತೇನೆ. ಅವನಿಗೆ ವಿರುದ್ಧವಾಗಿ ಡಿಕ್ರಿ ಆಯಿತೆಂದರೆ ಆ ಕಾಸ್ಟನ್ನು ಬೋರ್ಡು ತುಂಬಿಸಲಿಕ್ಕೆ ಪ್ರಯತ್ನ ಮಾಡುತ್ತದೆಯೇ? ಇದರ ಬಗ್ಗೆ ಏನೂ ಹೇಳಲಿಲ್ಲ. ಸಾಮಾನ್ಯವಾಗಿ, ನಾನು ಪಕೀಲ ನಾಗಿ ನನ್ನ ಆನುಭವದ ಮೇರೆಗೆ, ಪೋಲೀಸರಿಂದಲೋ, ಯಾರಿಂದಲೋ ಹೊಡೆತ ತಿಂದವನ ಮೇಲೆ, ಪೋಲೀಸರು ಪ್ರಾಸಿಕ್ಯೂಟ್ ಮಾಡಬೇಕು. ಅದಕ್ಕೆ ಪರ್ಮಿಷನ್ ಬೇಕಾಗುತ್ತದೆ. ಸಾಮಾನ್ಯವಾಗಿ

† Indicates that remarks or speeches have not been revised by the member concerned.

ಪರ್ಮಿಷನ್ ಕೊಡುವುದಿಲ್ಲ. ಗೃಹ ಖಾತೆ ಕಾರ್ಯದರ್ಶಿಯವರು ಕೊಡಬೇಕು, ಅವರು ಕೊಡುವುದಿಲ್ಲ. ಅಂತ ಸಂದರ್ಭದಲ್ಲಿ ಏನು ಮಾಡುತ್ತೀರಿ? ಪ್ರೊಸೀಡಿಂಗ್ಸ್ ಮಾತ್ರ ಉಂಟು, ಅವನಿಗೆ ಲೀಗಲ್ ಎಯಿಡ್ ಬೋರ್ಡಿನಲ್ಲಿ in all stages even to obtain permission for prosecuting police officials ಅವನಿಗೆ aid ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಸಲಹೆಗಳನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಎಸ್. ಪ್ರಮೀಳಾ (ಚಾಮರಾಜಪೇಟೆ)—ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ಈ ಮಸೂದೆಯನ್ನು ಏನು ತಂದಿದ್ದಾರೆ, ಇದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಶಾಸಕ ಮಹನೀಯರುಗಳು, ಈ ಸದನದಲ್ಲಿ ಮಹಿಳಾ ವಕೀಲರನ್ನು ಹಾಕುವುದರ ಬಗ್ಗೆ ಒಂದೆರಡು ಮಾತುಗಳನ್ನು ಆಡಿದ್ದಾರೆ.

ಶ್ರೀ ಪಿ. ಎನ್. ರೆಡ್ಡಿ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್, ಅವರ ಸಂಖ್ಯೆ ಎಷ್ಟು?

ಶ್ರೀಮತಿ ಎಸ್. ಪ್ರಮೀಳ.—ಸ್ವಾಮಿ. ನಾನು ಯೀಲ್ಡಾಗಿಲ್ಲ, ಮಹಿಳೆಯ ಸಂಖ್ಯೆ ಎಷ್ಟಿದೆ? ವ್ಯಾಯಶ: ರಾಜ್ಯದಲ್ಲಿ ಕಕ್ಷಿದಾರರಿಗೆ ಎಷ್ಟು ಜನ ಮಹಿಳಾ ವಕೀಲರಿದ್ದಾರೆಂಬುದು ಗೊತ್ತಿಲ್ಲ. ಇವತ್ತು ರಾಜ್ಯದಲ್ಲಿ ಮಹಿಳೆಯರ ಸಂಖ್ಯೆ ೫೦ ಭಾಗ ಇದೆಯೆಂದು ತೀರ್ಮಾನ ಮಾಡಿದ್ದಾರೆ. ಪತ್ರಿಕೆಗಳಲ್ಲೂ ಬಂದಿದೆ. ಕೋರ್ಟಿನಲ್ಲಿ ವ್ಯಾಜ್ಯಗಳು ಬಂದರೆ, ಹೊಡೆದಾಡತಕ್ಕಂಥ ಹಕ್ಕು ಪುರುಷರಿಗೂ ಇದೆ. ಸ್ತ್ರೀಯರಿಗೂ ಇದೆ. ವ್ಯಾಜ್ಯಗಳು ಕೋರ್ಟಿಗೆ ಹೋದರೆ, ೫೦ ಪರ್ಸೆಂಟ್ ಇರತಕ್ಕ ಮಹಿಳೆಯರು ಕೋರ್ಟಿನ ಬಾಗಿಲಿಗೆ ಅಲೆಯತಕ್ಕಂಥಾದ್ದು ಇದೆ. ಇವತ್ತು ಹೆಣ್ಣು ಮಕ್ಕಳು ಪುರುಷ ವಕೀಲರ ಹತ್ತಿರ ಹೋಗಂವುದನ್ನು ತಪ್ಪಿಸಬೇಕು. ಸ್ತ್ರೀಯರನ್ನು ಇಂಥ ಬೋರ್ಡುಗಳಿಗೆ ಹೆಚ್ಚಿಗೆ ಹಾಕಬೇಕು. ಮಹಿಳೆಯರ ಮೇಲೆ ನಡೆಯತಕ್ಕ ದಬ್ಬಾಳಿಕೆಯನ್ನೂ ಹೆಣ್ಣುಮಕ್ಕಳಿಗೆ ಆಗತಕ್ಕ ಅನ್ಯಾಯವನ್ನು ತನ್ನ ಗಂಡ ಏನು ಮಾಡಿದ ಎಂಬುದನ್ನೂ ಪುರುಷ ವಕೀಲರ ಹತ್ತಿರ ಹೋಗಿ ಹೇಳುವುದಕ್ಕೆ ಸಾಧ್ಯವಿಲ್ಲ, ಬಹಳ ಕಷ್ಟವಾಗುತ್ತದೆ. ಮಹಿಳಾ ವಕೀಲರ ಹತ್ತಿರವಾದರೆ ನಿರ್ಭಯವಾಗಿ, ತನ್ನ ಕಷ್ಟ ಸುಖಗಳನ್ನು ಹೆದರಿಕೆಯಿಲ್ಲದೆ ಬಂದು ಹೇಳಿಕೊಳ್ಳುತ್ತಾರೆ. ಇದನ್ನು ಮಾನ್ಯ ಪಿ.ಎನ್. ರೆಡ್ಡಿಯವರು ತಿಳಿದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಾಮಿ, ನಮ್ಮ ಹತ್ತಿರ ಹೆಣ್ಣುಮಕ್ಕಳು ಬರುತ್ತಾರೆ, ನಾವು ಚನ್ನಾಗಿಯೇ ನೋಡಿಕೊಳ್ಳುತ್ತೇವೆ.

ಶ್ರೀಮತಿ ಎಸ್. ಪ್ರಮೀಳ .—ಅವರ ಹತ್ತಿರ ಹೋಗುವುದಕ್ಕೆ ಸಾಧ್ಯವಿಲ್ಲ. ಹೆದರಿಕೊಂಡು ಬಂದು ಮನೆಯಲ್ಲಿ ಕೂತುಕೊಂಡಿದ್ದಾರೆ. ನನ್ನ ಹತ್ತಿರ ಬಂದು ಹೇಳಿದ್ದಾರೆ.

ಶ್ರೀ ಕೆ. ಭಾಸ್ಕರ ನಾಯ್ಡು.—ಯಾರಿಗೆ ಹೆದರಿಕೆಯಾಗುತ್ತೆ?

ಶ್ರೀಮತಿ ಎಸ್. ಪ್ರಮೀಳಾ.—ನನ್ನ ಹತ್ತಿರ ಅನೇಕ ಜನ ಹೆಣ್ಣುಮಕ್ಕಳು ಬಂದು ತಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡಿದ್ದಾರೆ. ಲೀಗಲ್ ಎಯಿಡ್ ಬೋರ್ಡಿನವರು ಕಳುಹಿಸಿದಂತ ಕೇಸುಗಳನ್ನು ಗೆದ್ದು ಕೊಟ್ಟಿದ್ದೇನೆ, ನ್ಯಾಯ ದೊರಕಿಸಿಕೊಟ್ಟಿದ್ದೇನೆ. ಅವರಿಂದ ದುಡ್ಡು ಕೂಡ ಕೇಳಿಲಿಲ್ಲ, ಶ್ರೀಮತಿ ಅನಂಸೂಯಮ್ಮನವರು, ಸುಶೀಲಾರವರು ಹೇಳಿದಹಾಗೆ, ಇದು ಪುರುಷ ಪ್ರಧಾನವಾದ ಸಮಾಜ ಪುರುಷರದೇ ಮೇಲುಗೈ ಇರತಕ್ಕ ಸಮಾಜ, ಹೆಣ್ಣು ಮಕ್ಕಳು ದಬ್ಬಾಳಿಕೆಯನ್ನು ತಾಳಿಕೊಂಡು ಇದುವರೆವಿಗೂ ಬಂದಿದ್ದಾರೆ. ಈ ದಬ್ಬಾಳಿಕೆ ಮುಂದೆ ನಿಲ್ಲಬೇಕು. ಹೆಣ್ಣು ಮಕ್ಕಳಿಗೆ ನ್ಯಾಯ ಹೆಚ್ಚಿಗೆ ಸಿಗಬೇಕು, ಇಂಥ ಪರಿಸ್ಥಿತಿಯಲ್ಲಿ ಮಹಿಳಾ ವಕೀಲರುಗಳಿಗೆ ಏನು ಸ್ಥಾನ ಕೊಟ್ಟಿದ್ದೀರಿ ಅದು ಸರಿಯಾಗಿದೆ. ಹೆಣ್ಣು ಮಕ್ಕಳು ಬಂದರೆ ಇವರಿಗೆ ಕಣ್ಣುರಿ ಏತಕ್ಕೆ? ಇದನ್ನು ಶಾಸಕರೇ ಘೋಷಿಸಿದರೆ, ಸಾಮಾನ್ಯ ಜನ ಹೆಣ್ಣು ಮಕ್ಕಳ ಎಂಥ ದಬ್ಬಾಳಿಕೆಗೆ ಗುರಿಪಡಿಸುತ್ತಾರೆಂಬುದನ್ನು ತಾವು ಪರಾಂಬರಿಸಬೇಕು. ತಾವು ಏನು ಕಾನೂನು ತಂದಿದ್ದೀರಿ, ಅದನ್ನು ಹಾಗೆ ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಹಿಂದೂ ಮ್ಯಾರೇಜ್ ಆಕ್ಟ್ ಡೈವೋರ್ಸ್ ಆಕ್ಟ್, ಮಟ್ರಿಮ್ಯಾನ್ಯುಯಲ್ ಆಕ್ಟ್ ಇವೆಲ್ಲಾ ಕೋರ್ಟುಗಳಲ್ಲಿ ಬರುವುದನ್ನು ನೋಡಿದ್ದೇವೆ. ಮೆಟ್ರಿಮ್ಯಾನ್ಯುಯಲ್ ಕೇಸಸ್ ಹೆಚ್ಚು ಹೆಚ್ಚು ಬರುವುದನ್ನು ನೋಡಿದ್ದೇವೆ. ತಾವು ಏನು ಬೋರ್ಡು ಇದರಲ್ಲಿ ಒಂದು ಪ್ರಾವಿಷನ್ ಮಾಡಬೇಕು

ಆದಕೋಸ್ಕರ ಸ್ಪೆಷಲ್ ಬೋರ್ಡ್ ಮಾಡಿ, ಹೆಂಗಸರ ಮೇಲೆ ಗಂಡಸರು ದಬ್ಬಾಳಿಕೆ ಮಾಡುವುದನ್ನು ಪ್ರತಿದಿನ ನೋಡುತ್ತಿದ್ದೇವೆ. ಪ್ರತಿ ದಿವಸ ಗಂಡ ಹೆಂಡತಿಗೆ ಹೊಡೆಯುವುದನ್ನು ನೋಡುತ್ತೇವೆ. ಹೆಣ್ಣು ಮಕ್ಕಳಿಗೆ ರಕ್ಷಣೆ ಬೇಡವೆ?

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಹೆಂಗಸರು ಗಂಡಸರನ್ನು ಹೊಡೆಯುತ್ತಾರೆ, ಗಂಡಸರಿಗೆ ರಕ್ಷಣೆ ಕೊಡುವವರು ಯಾರು?

SRI A. LAKSHMISAGAR.—Sir, the problem has two faces. desertion is there from both the sides Neither she has the experience nor I have the experience of it.

ಶ್ರೀಮತಿ ಎಸ್. ಪ್ರಮೀಳ.—ನಾನು ಮಾತನಾಡುವಾಗ ಇವರು ಏತಕ್ಕೆ ಮಧ್ಯ ಬಾಯಿ ಹಾಕುತ್ತಾರೋ ಗೊತ್ತಿಲ್ಲ, ನನಗೆ ಇಂಥ ದಬ್ಬಾಳಿಕೆ ಬೇಕಿಲ್ಲವೆಂದು ನಾನು ಹೀಗೆ ಇದ್ದೇನೆ. ಇಂಥ ಕ್ರೂರ ಸಂಕಟಕ್ಕೆ ಸಿಕ್ಕುವುದಕ್ಕೆ ಇಷ್ಟವಿಲ್ಲ. ಮನುಷ್ಯ ವರ್ಗ, ಪುರುಷ ವರ್ಗ, ಈ ಸಮಾಜ ಏನು ಮಾಡುತ್ತದೆ ಎಂಬುದನ್ನು ನೋಡುತ್ತಿದ್ದೇವೆ. ಆದರಿಂದ ಬೇಡ ಎಂದು ಇದ್ದೇನೆ. ನಿಮಗೆ ಗೊತ್ತಿಲ್ಲವೆಂದು ಹೇಳಬೇಡಿ. ಹೆಣ್ಣು ಮಕ್ಕಳಿಗಿಂತ ಹೆಚ್ಚಿಗೆ ವಿಷಯ ನಿಮಗೆ ಗೊತ್ತಿರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಪುರುಷರ ದಬ್ಬಾಳಿಕೆ ಬಗ್ಗೆ ಕಿಂಚಿತ್ ಅನುಭವ ಇಲ್ಲದೇ ಇರತಕ್ಕ ಪ್ರಮೀಳಾರವರು ಏಕೆ ಮಾತನಾಡುತ್ತಾರೋ ಗೊತ್ತಿಲ್ಲ?

ಶ್ರೀಮತಿ ಎಸ್. ಪ್ರಮೀಳಾ.—ಸ್ವಾಮಿ, ನಾನು ಮಾತನಾಡುವುದಕ್ಕೆ ನಿಂತರೆಇವರಿಗೆ ಏನಾಗುತ್ತೋ ಗೊತ್ತಾಗುವುದಿಲ್ಲ. ಮೊನ್ನೆ ನಾನು ಇಂಗ್ಲೆಂಡ್‌ಗೆ ಹೋಗಿದ್ದಾಗ ಅಲ್ಲಿ ನಮ್ಮನ್ನು ಕೇಳಿದರು. ನಾವು ಗಂಡ ಹೆಂಡತಿಯನ್ನು ಹೊಡೆಯುವುದನ್ನು ನೋಡಿದ್ದೇವೆ. ಮಹಿಳೆಯರು ಸುಮ್ಮನೆ ಏತಕ್ಕೆ ಇರುತ್ತೀರಿ ಎಂದು ಕೇಳಿದರು, ಅದಕ್ಕೋಸ್ಕರ ನಾನು ಕಾನೂನು ಮಂತ್ರಿಗಳನ್ನು ಕೇಳುತ್ತೇನೆ. ಪ್ರತಿ ದಿವಸ ಕುಡಿದು ಬಂದು, ಹೆಂಡತಿ ಮಕ್ಕಳನ್ನು ಹೊಡೆದು, ಅವರ ಮಾಂಗಲ್ಯಗಳನ್ನು ತೆಗೆದುಕೊಂಡು ಹೋಗಿರುವುದನ್ನು ನೋಡುತ್ತೇವೆ. ಪ್ರತಿ ದಿವಸ ನೋಡುತ್ತಿದ್ದೇವೆ.

(SRI M. C. BASAPPA in the Chair)

ಲೀಗಲ್ ಬೋರ್ಡ್ ಏನು ತಂದಿದ್ದಾರೆ, ಬಹಳ ಉತ್ತಮವಾದಂತಹ ಬೋರ್ಡ್‌ನ್ನು ತಂದಿದ್ದಾರೆ. ಇಂತಹ ಗಂಡಧಿರು ಹೆಂಡತಿಯನ್ನು ಹೊಡೆದಾಗ ಕೋರ್ಟ್‌ಗೆ ಹೋಗುವ ಹಾಗೆ ಪ್ರಿವೆಂಟೀವ್ ಲೀಗಲ್ ಮೇಜರ್ ಬೋರ್ಡ್‌ನಲ್ಲಿ ತಂದು ಅವರ ಕಷ್ಟಸುಖಗಳನ್ನು ನೀಗುವುದಕ್ಕೆ ಅವಕಾಶ ಮಾಡಿಕೊಡಬೇಕು.

SRI S. LAKSHMISAGAR.—There have also been cases where women also have beaten their husbands.

ಇದು ಹೆಂಗಸರು ಗಂಡಂದಿರನ್ನು ಹೊಡೆದಂತಹ ಸನ್ನಿವೇಶ ಉದಾಹರಣೆಗಳಿವೆ, ಅದಕ್ಕೆ ನಾವೇನು ಮಾಡೋಣ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ ಇಬ್ಬರೂ ಬ್ರಹ್ಮಚಾರಿಗಳೇ ಇವರಿಗೆ ಹೇಗೆ ಗೊತ್ತು ?

ಕು. ಎಸ್. ಪ್ರಮಿಳಾ.—ಗಂಡ ಹೆಂಡತಿಯನ್ನು ಹೊಡೆಯಲಿ, ಹೆಂಡತಿ ಗಂಡನನ್ನು ಹೊಡೆಯಲಿ ಇಬ್ಬರಲ್ಲಿ ಹೊಡೆಸಿಕೊಂಡವರು ಇಂತಹ ಒಂದು ಬೋರ್ಡ್‌ಗೆ ..

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸಾವಿರ ಕುದುರೆ ಸರದಾರ, ಮನೆ ಹೆಂಗಸಿಗೆ ಕಾಸದಾರ ಎಂದು ಇದೆ.

ಕು. ಎಸ್. ಪ್ರಮಿಳಾ.—ತಾವು ದಯವಿಟ್ಟು ಹಾಗೆ ಆಗಬೇಡಿ. ನಿಮ್ಮ ಹಕ್ಕುಗಳನ್ನು ಯಾವಾಗ ಚಲಾಯಿಸುವುದಕ್ಕೆ ಆಗುವುದಿಲ್ಲವೊ. ನಾವು ಎದ್ದುನಿಂತುಕೊಂಡು ಹಕ್ಕುಗಳನ್ನು ಚಲಾಯಿಸುವುದಕ್ಕೆ. ಆಗುವುದಿಲ್ಲ ಅನ್ನತಕ್ಕ ಕಾಲ ಬಂದಿದೆ, ಮನುಷ್ಯರಾಗಿ ಉಳಿಯಿರಿ ಎಂದು ಹೇಳುವ ಕಾಲ ಬಂದಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿಯೆಂದು ಕೇಳಿಕೊಳ್ಳುತ್ತೇನೆ. ಮನೆಯಂವರಿಗೆ ಸರದಾರರಾಗಿ

ಕಾಸದಾರರಾಗಬೇಡಿ. ಪ್ರಪಂಚ ಹೇಗೆ ಆಗಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಮುಂದೆ ಆ ರೀತಿ ಆಗುವುದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಪ್ರಿವೆಂಟೀವ್ ಬೋರ್ಡ್ ಅಥವಾ ಲೀಗಲ್ ಏಡ್ ಬೋರ್ಡ್ ಎಂದು ಏನು ತರುತ್ತಿದ್ದೀರಿ ಅದನ್ನು ಮ್ಯಾಟ್ರಿಮೋನಿಯಲ್ ಕಾಸ್‌ನ್‌ಬೋರ್ಡ್ ಎಂದು ಹೇಳಿ ಅದರಲ್ಲಿ ಸೋಷಿಯಲ್ ವರ್ಕರ್, ಡಾಕ್ಟರ್ ಮತ್ತು ಮಹಿಳೆಯರು ಇರುವುದಕ್ಕೆ ಅವಕಾಶ ಮಾಡಿಕೊಟ್ಟು ಅವರ ಕಷ್ಟಸುಖಗಳನ್ನು ನೀಗಿಸುವುದಕ್ಕೆ ನೀವು ಒಂದು ಪ್ರಾವಿಜನ್ ಮಾಡಿಯೆಂದು ಮಾನ್ಯ ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಲೀಗಲ್ ಏಡ್ ಬೋರ್ಡ್, ಕೋರ್ಟ್‌ಗೆ ಹೋದರೆ ನಾವು ಲೀಗಲ್ ಏಡ್ ಕೊಡುತ್ತೇವೆಂದು ಹೇಳಬಾರದು. ಎಷ್ಟು ಸಾಧ್ಯವೋ ಅದನ್ನು ಮಾಡಬೇಕು. ಕೋರ್ಟ್‌ಗೆ ಹೋದ ನಂತರ ಕಾನೂನುಗಳನ್ನು ಸಾಧನಗಳನ್ನು ಅವಕಾಶಗಳನ್ನು ಮಾಡಿಕೊಡಬೇಕೋ ಅದನ್ನು ಕೊಡಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ prevention is better than cure ಎಷ್ಟೆಷ್ಟು ಸಾಧ್ಯವೋ ಅಷ್ಟನ್ನು ಆಫ್ಟೆಲ್ಸ್ ಕೊಟ್ಟುರೆ ಮಹದುಪಕಾರ ಮಾಡಿದಂತಾಗುತ್ತದೆ ಆ ಕೆಲಸವನ್ನು ಮಾಡಿಯೆಂದು ಕೇಳಿಕೊಳ್ಳುತ್ತಿದ್ದೇನೆ, ನಮ್ಮ ಲ್ಲಿರತಕ್ಕ ಸಾಮಾನ್ಯ ಜನತೆಗೆ ಇವತ್ತಿನ ದಿವಸ ಏನಾಗಿದೆ, ಹಕ್ಕು ಭಾಧ್ಯತೆಗಳೇನು ನಮ್ಮ ಹಕ್ಕೇನು ನಮ್ಮ ರೈಟ್ಸ್ ಡ್ಯೂಟೀಸ್ ಲಯಬಿಲಿಟೀಸ್ ಅಂಡ್ ಅಬಲಿಗೇಷನ್ಸ್ ಏನು ಎಂದು ಹೇಳುತ್ತಿದ್ದೇವೆ, ನಮ್ಮ ರಾಜ್ಯಾಂಗದಲ್ಲಿ ಏನು ಇದೆ ಮೂಲಭೂತವಾಗಿ ನಮ್ಮ ಪಳ್ಳಿಯ ಪ್ರಜೆಗಳಿಗೆ ಗೊತ್ತಿಲ್ಲ, ನಮ್ಮ ಹಕ್ಕುಗಳೇನು ಎಂಬುದನ್ನು ತಿಳಿಸಿಕೊಟ್ಟರೆ ಅವರು ನಮ್ಮ ಹಕ್ಕು ಎಲ್ಲಿ ಉಲ್ಲಂಘನೆ ಆಗಿದೆ ಎಂಬುದನ್ನು ನೋಡಿಕೊಂಡು ಅವರು ಅಧಿಕಾರಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಕರ್ನಾಟಕ ರಾಜ್ಯ ದಲ್ಲಿ ಮಾನ್ಯ ಮಂತ್ರಿಗಳು ಲೀಗಲ್ ಬೋರ್ಡ್ ಒಂದು ಸೆಲ್ ಮಾಡಿ ಸೆಲ್ ಮುಖಾಂತರ ಮನೆಮನೆಗೆ ಬಡವರಿಗೆ ಮತ್ತು ಹಳ್ಳಿಯ ಸಾಮಾನ್ಯ ಪ್ರಜೆಗಳ ಹಕ್ಕುಗಳು ಏನು ಇದೆ, ರಾಜ್ಯಾಂಗ ಮೂಲಭೂತ ವಾಗಿ ಏನೇನು ಸೌಕರ್ಯಗಳಿವೆ ಎಂಬುದನ್ನು ಇದರ ಮುಖಾಂತರ ತಿಳಿಸಿಕೊಟ್ಟರೆ ಅನುಕೂಲವಾಗುತ್ತದೆ. ಈ ರೀತಿ ಮಾಡಲು ಈ ಬೋರ್ಡ್‌ನಲ್ಲಿ ಅವಕಾಶ ಮಾಡಿಕೊಡಬೇಕು. ಆ ಹಕ್ಕುಗಳನ್ನು ಅವರಿಗೆ ತಿಳಿಸಿದ ಮೇಲೆ ಅವರು ನಮ್ಮ ಹಕ್ಕು ಎಲ್ಲಿ ಉಲ್ಲಂಘನೆ ಆಗಿದೆ ಎಂಬುದನ್ನು ನೋಡಿಕೊಳ್ಳಲು ಅನುಕೂಲವಾಗುತ್ತದೆ ಅದನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಮುಖ್ಯವಾಗಿ ಪ್ರಾಯಶಃ ಮಾನ್ಯ ವೆಂಕಟರಾಮಯ್ಯನವರು ಹೈಕೋರ್ಟ್‌ನಲ್ಲಿ ಜಡ್ಜ್ ಆಗಿದ್ದ ಸಂದರ್ಭದಲ್ಲಿ ಅವರು ಮನೆಯ ಮುಂದೆ ನ್ಯಾಯ ದೊರೆಯುವಂತಹದ್ದು ಆಗಬೇಕು ಎಂದು ಅವರು ಹೇಳಿದರು. ಅದೇ ರೀತಿ ಅವರು ಕೋಲಾರದಲ್ಲಿ ಪಾದಯಾತ್ರೆ ಮಾಡಿ ಮನೆಮನೆಗೆ ಲೀಗಲ್ ಏಡ್ ಮುಖಾಂತರ ಹಾಕಿಕೊಂಡಿದ್ದರು ಇವತ್ತಿನ ದಿವಸ ನಮ್ಮ ಪಳ್ಳಿಯಲ್ಲಿರತಕ್ಕ ಬೀದರ್, ಬಿಜಾಪುರ ಇಂತಹ ಕಡೆಗಳಲ್ಲಿ ಇರತಕ್ಕ ಮುಗ್ಧ ಜನಗಳಿಗೆ ತನಗಾಗಿರತಕ್ಕ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ, ಲೀಗಲ್ ಬೋರ್ಡ್ ಎಂದು ಏನು ಮಾಡಿದ್ದೀರಿ ಅದರಲ್ಲಿ ನ್ಯಾಯದಾನ ಕೊಡಿಸು ವುದಕ್ಕೆ ಪ್ರಾವಿಜನ್ ಮಾಡಿ ಮನೆಮನೆಗಳಿಗೆ ಹೋಗಿ ನ್ಯಾಯವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಲಿ ಅಲ್ಲಿಯೇ ಸಾಧ್ಯವಾದರೇ ನ್ಯಾಯವನ್ನು ಸಾಲ್ವ್ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿ. ಅಲ್ಲಿಯೇ ಸಾಲ್ವ್ ಮಾಡುವುದಕ್ಕೆ ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಅವರ ಪರಿಸರವನ್ನು ನೋಡಿ ಸರ್ಕಾರ ಅವನಿಗೆ ನೆರವು ಕೊಡತಕ್ಕ ಯೋಗ್ಯತೆ ಇದೆಯೇ ಎಂಬುದನ್ನು ನೋಡಿಕೊಂಡು ಕೊಡುವುದಕ್ಕೆ ಅವಕಾಶ ಮಾಡಲಿ. ಇದಕ್ಕೂ ಒಂದು ಪ್ರಾವಿಜನ್ ಮಾಡಿಯೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೊಂದು ಮುಖ್ಯವಾದ ವಿಚಾರವನ್ನು ಮಾನ್ಯ ಮಂತ್ರಿಗಳಲ್ಲಿ ಕೇಳತಕ್ಕದ್ದೆನೆಂದರೆ ನೀವು ಹೇಳುತ್ತೀರಿ ಲೀಗಲ್ ಏಡ್ ಕೊಡು ತ್ತೇವೆ, ಏತಕ್ಕೆ ಲೀಗಲ್ ಏಡ್ ಬೇಕೇ ಅನ್ನತಕ್ಕ ಪ್ರಶ್ನೆ ಇದೆ. ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ನವರಿಗೆ ಲೀಗಲ್ ಏಡ್ ಬೇಕಾಗಿರತಕ್ಕದು ನಮ್ಮ ಕಕ್ಷಿದಾರರಿಗೆ ಕೋರ್ಟ್ ಇಲ್ಲಿ ಕಾನೂನನ್ನು ನೋಡಿ ಇವತ್ತು ಕೂಡ ಕಕ್ಷಿದಾರರು ವಾದ ಮಾಡಲಿ, ಲಾಯರ್‌ಗಳು ವಾದ ಮಾಡಲಿ ಬಿಡಲಿ, ಜಡ್ಜ್‌ಗಳನ್ನು ನೇಮಿಸುವುದು ಸರಿಯೇ ಎನ್ನುವ ಅಭಿಪ್ರಾಯ ಇದೆ. ಆದರೆ ನ್ಯಾಯದಾನ ಲೀಗಲ್ ಬಗ್ಗೆ ನೀವು ಇಲ್ಲಿ ಎಕ್ಸ್‌ಕ್ಯೂಟೀವ್ ಕೋರ್ಟ್‌ಗಳೆಂದು ಎಲ್ಲೆಲ್ಲಿ ಮಾಡಿದ್ದಾರೆ ಅಲ್ಲಿ ಎಕ್ಸ್‌ಕ್ಯೂಟೀವ್ ಆಫೀಸರುಗಳು ಹೆಚ್ಚು ಕಾನೂನು ದುರುಪಯೋಗ ಮಾಡುತ್ತಿದ್ದಾರೆ, ನೀವು ವಕೀಲರನ್ನು ಹಾಕುವುದಕ್ಕೆ ಅವಕಾಶ ಮಾಡಿ ಕೊಟ್ಟಿಲ್ಲ ಉದಾಹರಣೆಗೆ ಹೇಳುವುದಾದರೆ ಲ್ಯಾಂಡ್ ಟ್ರಿಬ್ಯೂನಲ್ಸ್‌ನಲ್ಲಿ ೭೦ ಸಾವಿರ ಅರ್ಜಿಗಳು ಹೈಕೋರ್ಟಿಗೆ ಬಂದು ಬಿದ್ದಿವೆ ಕಾರಣವೇನು ? ಇವರಿಗೆ ವಕೀಲರ ಸಹಾಯ ಲೀಗಲ್ ಏಡ್ ಮೆನೆಂಟ್ ಗೆ ಸಿಕ್ಕಿದ್ದರೆ ಈಸರಿಗೆ ಇಷ್ಟೆಂದು ಕೇಸುಗಳು ಕೋರ್ಟ್‌ಗೆ ಬರುವುದಕ್ಕೆ ಅವಕಾಶವಾಗುತ್ತಿರಲಿಲ್ಲ.

ಆದುದರಿಂದ ನಾನು ಕೇಳಿಕೊಳ್ಳುತ್ತಿದ್ದೇನೆ ಲೀಗಲ್ ಏಡ್ ಕೊಡುವುದಾದರೆ ಎಕ್ಸ್‌ಕ್ಲೂಸೀವ್ ಕೋರ್ಟ್‌ಗಳಲ್ಲಿ ಕಡ್ಡಾಯವಾಗಿ ಲೀಗಲ್ ಏಡ್ ಕೊಡತಕ್ಕಂತಹ ವಕೀಲರು ಯಾರೇ ಆಗಲಿ ನೀವು ಮಾಡದೆ ಹೋದರೆ ನೀವು ನ್ಯಾಯದಾನವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾನೂನು ಪ್ರಕಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಈ ಕೆಲಸವನ್ನು ನೀವು ಮಾಡಿ ಎಂದು ನಾನು ನಿಮ್ಮನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ. ಇಲ್ಲಿ ವಕೀಲರ ಹಕ್ಕುಬಾಧ್ಯತೆಗಳಿಗೆ ಭಂಗ ತರತಕ್ಕಂತಹ ಒಂದು ಸೆಕ್ಷನ್‌ನ್ನು ನೀವು ಇಲ್ಲಿ ಹಾಕಿದ್ದೀರಿ, ಆದರಲ್ಲಿ ಏನು ಹೇಳುತ್ತೀರಿ ಸೆಕ್ಷನ್ ೫ ರಲ್ಲಿ ಡಿಸ್‌ಕ್ವಾಲಿಫಿಕೇಶನ್ ಎಂದು ಹೇಳುತ್ತೀರಿ, ಸೆಕ್ಷನ್ ೫ (ಎ) (ಬಿ) ಎಂದು ಇಲ್ಲಿ ಡಿಸ್‌ಕ್ವಾಲಿಫಿಕೇಶನ್‌ಗೆ ಯಾರಾವರೂ ಇನ್‌ವಾಲ್ವ್ ಆದರೆ ಅಥವಾ ಅವನು ಏನಾದರೆ ಅನ್ ಸೌಂಡ್ ಮೈಂಡ್ ಆದರೆ ನಾನು ಕೇಳುತ್ತಿದ್ದೇನೆ ಒಂದು ವೇಳೆ ನಿಮ್ಮ ಬೋರ್ಡ್‌ನಲ್ಲಿ ಲೀಗಲ್ ಏಡ್ ವ್ಯತಿರಿಕ್ತವಾಗಿ ಕೆಲಸ ಮಾಡುತ್ತಿದೆ ಯೆಂದು ಗೊತ್ತಾದ ಸಂದರ್ಭದಲ್ಲಿ ಅವನನ್ನು ತೆಗೆದು ಹಾಕುವುದಕ್ಕೆ ಸೆಕ್ಷನ್ (೬) ೨-೩ (ಬಿ) ಅವಕಾಶ ಮಾಡಿಕೊಟ್ಟಿದ್ದೀರಿ. ಡಿಸ್‌ಕ್ವಾಲಿಫಿಕೇಶನ್‌ಗೆ ಅವನು ಬರುತ್ತಾನೆಯೇ ಇಲ್ಲವೇ ಎನ್ನುವ ಪ್ರಶ್ನೆ ಉದ್ಭವಿಸಿದೆ. ಒಂದು ವೇಳೆ ಅವನು ಡಿಸ್‌ಕ್ವಾಲಿಫಿಕೇಶನ್‌ಗೆ ಎಂದು ತೆಗೆದು ಹಾಕಿದರೆ ಅವನು ನ್ಯಾಯವಾಗಿ ಲೀಗಲ್ ಕೊಡುತ್ತಿಲ್ಲ, ವ್ಯತಿರಿಕ್ತವಾಗಿ ಕೆಲಸ ಮಾಡುತ್ತಿದ್ದಾರೆ, ಅಂತಹವರನ್ನೇ ಮುತ್ತೆ ನೇಮಕ ಮಾಡುತ್ತೀರಾ ? ಇದನ್ನು ದಯವಿಟ್ಟು ನೋಡಬೇಕು. ಇನ್ನೊಂದು ವಿಚಾರ ಸೆಕ್ಷನ್ (೬) ೨-೩ (ಬಿ) ಇದನ್ನೆ ಸೆಕ್ಷನ್ ೧೫ರಲ್ಲಿ ತಾವು ದಯವಿಟ್ಟು ನೋಡಬೇಕು, ನೀವು ಏನು ಹೇಳುತ್ತೀರಿ ತೆಗೆದುಹಾಕುವ ಹಕ್ಕನ್ನು ಉಳಿಸಿಕೊಂಡಿದ್ದೀರಿ Section 15-2(c) lays down norms, standardisation and guidelines relating to the conduct and behaviour of legal practitioners and other persons working in connection with the legalised programme under the provisions of this Act. ನೀವು ಅದರ್ ಪರ್‌ಸನ್‌ಗೆ ನೀವು ಏನು ಬೇಕಾದರೂ ಮಾಡಿಕೊಳ್ಳಿ ಆದರೆ, ವಕೀಲರ ತಂಟೆಗೆ ಈ ಬೋರ್ಡ್‌ನಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ವಕೀಲರಿಗೆ ಬಾರ್ ಕೌನ್ಸಿಲ್ ಆಕ್ಟ್ ಇದೆ, ಸ್ಟಾಟುಚರಿ ಬೋರ್ಡ್, ಸ್ಟಾಟುಚರಿ ಆಕ್ಟ್ ಇದೆ. ಬಾರ್ ಕೌನ್ಸಿಲ್‌ನಲ್ಲಿ ಪ್ರಾವಿಜನ್ ಇದೆ. ಯಾರಾದರೂ ಒಬ್ಬ ವಕೀಲರು ಮಿಸ್ ಕಾನ್‌ಡಕ್ಟ್ ಮಾಡಿದರೆ ಕಾನೂನಿಗೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಬಾರ್ ಕೌನ್ಸಿಲ್‌ನಲ್ಲಿ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಲೀಗಲ್ ಬೋರ್ಡ್‌ನಲ್ಲಿ ಕೇಸ್ ಹಾಕುವುದಕ್ಕೆ ಅಧಿಕಾರವನ್ನು ಉಳಿಸಿಕೊಂಡಿದ್ದೀರಿ. ಒಂದು ವೇಳೆ ಅಂತಹುದೇನಾದರೂ ನಿಮ್ಮ ಗಮನಕ್ಕೆ ಬಂದರೆ ಕಂಪ್ಲೇನೆಂಟ್ ಲೀಗಲ್ ಬೋರ್ಡ್‌ಗೆ ಕಂಪ್ಲೇಂಟ್ ಮಾಡಿ ಬಾರ್ ಕೌನ್ಸಿಲ್‌ಗೆ ಕಂಪ್ಲೇಂಟನ್ನು ದಾಖಲೆ ಮಾಡಬಹುದೇ ಹೊರತು ನೀವು ವಕೀಲರ ಕಾನ್‌ಡಕ್ಟ್ ಬಗ್ಗೆ ಆಗಲೀ ಬಿಹೇವಿಯರ್ ಬಗ್ಗೆ ಆಗಲೀ ನೀವು ಕ್ರಮ ತೆಗೆದುಕೊಳ್ಳುವುದು ಅಷ್ಟು ಉಚಿತವಲ್ಲ. ಕಾನೂನು ಏನು ಇದೆ ವಕೀಲರ ಮೂಲಭೂತ ಹಕ್ಕುಗಳು ಅವರ ಫುಂಡಮೆಂಟಲ್ ರೈಟ್ಸ್ ಏನು ಇದೆ, ಅವರು ಪ್ರಾಕ್ಟೀಸ್ ಮಾಡುವುದಕ್ಕೆ ಭಂಗ ಬರುತ್ತದೆ, ಇಂತಹ ಕೆಲಸವನ್ನು ದಯವಿಟ್ಟು ಮಾಡಬೇಡಿ. ನೀವು ಮಾಡಬೇಕೆನ್ನುವ ಉದ್ದೇಶ ಇದ್ದರೆ ನಿಮ್ಮ ಕಂಪ್ಲೇಂಟನ್ನು ಲೀಗಲ್ ಬೋರ್ಡ್‌ಗೆ ಕೊಟ್ಟು ಬಾರ್ ಕೌನ್ಸಿಲ್‌ಗೆ ರೆಫರ್ ಮಾಡಿ ಕಾನೂನು ಪ್ರಕಾರವಾಗಿ ಕೆಲಸ ಮಾಡಿ ವಕೀಲರ ಮಿಸ್ ಕಾನ್‌ಡಕ್ಟ್ ಬಗ್ಗೆ ಕಂಪ್ಲೇಂಟ್ ಮಾಡಬಹುದೇ ಹೊರತು ಪವರ್ ಆಫ್ ದಿ ಬೋರ್ಡ್‌ನಲ್ಲಿ ವಕೀಲರ ಕಾನ್‌ಡಕ್ಟ್ ಬಗ್ಗೆ ಅವರ ಬಿಹೇವಿಯರ್ಸ್ ಬಗ್ಗೆ ನೀವು ಆಕ್ಷನ್ ತೆಗೆದುಕೊಳ್ಳುವುದು ಅಷ್ಟು ಉಚಿತವಲ್ಲ. ಇಂತಹ ಕೆಲಸವನ್ನು ಮಾಡಿದ್ದೆ ಆದರೆ ಯಾವುದೇ ಒಬ್ಬ ವಕೀಲ ನಿಮ್ಮ ಲೀಗಲ್ ಬೋರ್ಡ್‌ಗೆ ಬರುವುದಿಲ್ಲ. ಒಳ್ಳೆಯ ವಕೀಲರುಗಳು ಇದ್ದಾರೆ. ಒಳ್ಳೆಯವರನ್ನು ತೆಗೆದುಕೊಳ್ಳಬೇಕಾದರೆ ಇಲ್ಲಿ ಅವರು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಹೇಳುತ್ತೀರಿ ನಿಮ್ಮ ಸ್ಕೀಮ್‌ನಲ್ಲಿ ನಿಮ್ಮ ಆಕ್ಟ್‌ನಲ್ಲಿ ಹೇಳುತ್ತೀರಿ ಜಡ್ಜ್‌ಗಳನ್ನು ತೆಗೆದುಕೊಳ್ಳಬಹುದೆಂದು ಹೇಳುತ್ತೀರಿ. ನಾನು ಕೇಳುತ್ತಿದ್ದೇನೆ ಸಂವಿಧಾನದ ಪ್ರಕಾರವಾಗಿ ಜಡ್ಜ್‌ಗಳನ್ನು ಇನ್‌ವಾಲ್ವ್ ಮಾಡಿದಾಗ ಹೈಕೋರ್ಟ್ ಲೀಗಲ್ ಏಡ್ ಇದರಲ್ಲಿ ಅಂದರೆ ಸೆಕ್ಷನ್ ೧೫ (ಸಿ)ನಲ್ಲಿ ಜಡ್ಜ್‌ಗಳ ಕಾನ್‌ಡಕ್ಟ್ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬೋರ್ಡ್‌ನಲ್ಲಿ ಸಾಧ್ಯವಿದೆಯೆ? ಇದನ್ನು ವಿಲ್ಲಿಯವರೆಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಯಾವುದಾದರೂ ಒಂದು ಕಾನೂನು ಪ್ರಕಾರವಾಗಿ ಸಾಧ್ಯವಾಗುವುದಿಲ್ಲವೋ ಅಂತಹ ಸೆಕ್ಷನ್‌ನ್ನು ನೀವು ಉಳಿಸಿಕೊಳ್ಳತಕ್ಕಂತಹದ್ದು ಉಚಿತವಲ್ಲ. ಇದರ ಬಗ್ಗೆ ನೀವು ಯೋಚನೆ ಮಾಡಬೇಕು, ನೀವು ಯೋಚನೆ ಮಾಡಿ. ನಾನು ಸಲಹೆ ಮಾಡುತ್ತಿದ್ದೇನೆ ನೀವು ತೆಗೆದು ಹಾಕಿ ಎಂದು ಯಾವು ಹೇಳುತ್ತಿಲ್ಲ, ತಪ್ಪು ಮಾಡಿದರೆ ವಕೀಲರುಗಳಿಗೆ ಬಾರ್ ಕೌನ್ಸಿಲ್ ಇದೆ ಬೇರೆಯವರಾದರೆ they will come

within the purview of the Bar Council Act. They can take action against them. ಇದನ್ನು ಗಮನದಲ್ಲಿಟ್ಟುಕೊಂಡು ದಯವಿಟ್ಟು ಇದನ್ನು ಮಾಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಂಡು ಇಷ್ಟು ಹೇಳ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† SRI V.V. PATTAR.—Mr. Speaker Sir, Karnataka has been one of the pioneer States in India in bringing the social measures, Many of the legislations were passed in the past. Similarly, this government has brought a useful piece of Legislation before this House. I must expt ess my thanks to the Goverument and the Hon, Minister for Law for binging in this Legislation for the first time, before any other state could bring in this Legislation.

So far as this legislation is concerned, I am referring to Section 17, wherein six clauses of persons will be getting special legal aid. In these clauses, there are agricultural labourers, rural artisans and small farmers are also there, Here, the word 'rural artisans' is used; But artisans are spread all over the state both in villages and towns. Tuerefor, I am stating that wherever artisans are there, this legal aid should be given. Particularly this section of the people are very poor and they require a special aid. Therefore, do not confine this legislation to the rural artisans only but to the artisans spread throughout the State. This is one point. Secondly I would suggest that one more class should be added which requires special need to provide legal aid. That class is 'disabled persons'. That has not been mentioned in this Bill. This is the international year of 'disabled' and this class of people require special aid from the Government. Then Sir, you have made many legislations in the state for the aid of the agricultural labourers, industrial labourers. We have made this minimum wages act. According to that industrial labourer should get the minimum wages. Accordingly, the agricultural labourer must get minimum wages. But I am bringing to the notice of the Law Minister that these legislations are not strictly enforced. None is obeying this particular legislation. Legal Aid, I wish to interprete should not only be confined to courts and lawyers but it must come to the aid of these poor agricultural labourers Legislations are made by this augut House and they must come to the aid of the persons who are in need of it. They must be strictly enforced. If they are not enforced, what is the use of making these legislations. Sir, under our Constitution, 18% of the service benefits and education benefits should go to the Scheduled Caste people. But even after 34 years of the independence, this law is not strictly enforced. This is the state of affairs. I wish to quote one example here. There is one Bombay Textile Commissioner's order which is meant for giving pro-

tection to the Handloom weavers who are living below the poverty line. But for the last 11 years, that piece of legislation has not been enforced. Therefore, I would suggest that we must have an enforcement Cell to ensure enforcement of all legislations passed by this House, especially with regard to the social welfare measures. Otherwise, what is the use of bringing in so many legislations in the name of poor persons without enacting them? Therefore I request the Law Minister to ensure strict enforcement of this legislation, which is meant for the poor people. I hope he will kindly take note of this. With this, I thank the Chair for having given me an opportunity to speak on this Bill.

SRI C.M. ARUMUGHAM.—Sir, this is an important Bill. We want to speak on this Bill.

CHAIRMAN.—There are 19 Bills as agreed to in the Business Advisory Committee Meeting to be completed by 30th and 31st March 1981. The speaker has made an announcement also. Can we sit beyond 6 'O' clock.

SRI C. M. ARUMUGHAM.—We will take it up tommorrow. Today we will sit upto 6 'O' clock.

ಶ್ರೀ ಬಿ. ಭಾಸ್ಕರಶೆಟ್ಟಿ.—ಅಧ್ಯಕ್ಷರೇ, ನಾಳೆ ಬಹಳ ಬಿಲ್ಲುಗಳು ಪಾಸ್ ಆಗಬೇಕಾದ್ದು ಇವೆ. ಅವುಗಳನ್ನೆಲ್ಲಾ ನಾಳೆಯೇ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಡಿ ಜಯದೇವರಾಜ್ ಅರಸ್.—ಅಧ್ಯಕ್ಷರೇ, ಒಂದೇ ದಿವಸ ೩೫ ಆಕ್ಟ್ ತಂದು ಪಾಸ್ ಮಾಡಬೇಕು ಎಂದರೆ, ನಾವು ಸೂಚನೆ ಕೊಡುವುದು ಬೇಡವೆ ನಾವು ರಾತ್ರಿಕರಾಗಿ ಮಿತಕ್ಕೆ ಬರಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ನಿಮ್ಮ ನಾಯಕರು ಬಿಸಿನೆಸ್ ಆಡ್ವೈಸರಿ ಕಮಿಟಿಯಲ್ಲಿ ಒಪ್ಪಿಕೊಂಡಿದ್ದಾರೆ

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

†ಶ್ರೀ ಕೆ. ಪ್ರಭಾಕರ್.- ಸನ್ಮಾನ್ಯ ಅಧ್ಯಕ್ಷರೆ ಈ ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ಮುಂಚಿ ಮುಖ್ಯವಾದ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಶನಿವಾರ ಪೇಪರ್‌ದ ರೀತಿ ೩೦ ಮತ್ತು ೩೧ನೇ ತಾರೀಖು ಸುಮಾರು ೧೩—೧೪ ಬಿಲ್ಲುಗಳನ್ನು ಪಾಸ್ ಮಾಡ ಬೇಕೆಂದು ಇದ್ದೇವೆಂದು ತಿಳಿಸಿದ್ದಿರಿ. ಆದರೆ ಬಗ್ಗೆ ನಾವು ಟೈಮ್ ಎಕ್ಸ್‌ಟೆನ್‌ಷನ್ ಮಾಡಿದ್ದೇವೆಂದು ತಿಳಿಸಿದ್ದಿರಿ. ಈಗತಾನೇ ಅಧ್ಯಕ್ಷರ ಪೀಠದಲ್ಲಿದ್ದಂತಹ ಅಧಕ್ಷರು ಮಾತನಾಡುತ್ತಾ ಇವೊತ್ತು ಬದಾರು ಬಿಲ್ಲುಗಳು ಪಾಸಾಗಬೇಕಾಗಿತ್ತು ಎಂದು ಹರೀಬರೀನಲ್ಲಿ ಓದಿಸುವುದಕ್ಕೆ ಹೋದರೆ ಸನಗಾದರೂ ಅನ್ನಿಸು ತ್ತದೆ. ಇವೊತ್ತು ಆರು ಬಿಲ್ಲುಗಳು ಪಾಸ್ ಆಗಬೇಕು ಎಂದು ಇದ್ದಿದ್ದರೆ ಒಂದೊಂದು ಬಿಲ್ಲಿಗೂ ಇಪ್ಪತ್ತು ಟೈಮ್ ಅಂತ ಅಲಾಟ್ ಮಾಡಿ ಆ ಸಮಯಕ್ಕೆ ಹಿಂದಕ್ಕೂ ಮುಂದಕ್ಕೂ ಹೋಗದಂತೆ ಮಾಡ ಬೇಕಾಗಿತ್ತು. ಇವೊತ್ತು ಕಡೆಯಲ್ಲಿ ಒಂದು ಬಿಲ್ಲು ಬಂದರೆ. ಈ ಬಿಲ್ಲು ಆರು ಗಂಟೆಯಲ್ಲಿ ಆಗಬೇಕಾಗಿತ್ತು ಇದರ ಮೇಲೆ ಮಾತನಾಡಬೇಡಿ ಎಂದರೆ. ಸದಸ್ಯರ ಹಕ್ಕಿಗೆ ಚ್ಯುತಿಯಾಗುತ್ತದೆ. ಈ ಬಿಲ್ಲು ಅತಿ ಮುಖ್ಯವಾದದು ಎಂದು ಹೇಳುತ್ತಾ ಅಷ್ಟೇ ರೀತಿಯಲ್ಲಿ ಕೈಬಿಡಿ ಎಂದು ಹೇಳುವ ನೀತಿಯನ್ನು ನಾನು ಒಪ್ಪುವುದಿಲ್ಲ. ಇದರ ಜೊತೆಗೆ ಈ ಬಿಲ್ಲಿಗಿಂತಲೂ ಅತಿ ಪ್ರಾಮುಖ್ಯವಾದ ಬಿಲ್ಲು ಇನ್ನೂ ಇವೆ ಎಂದು ಹೇಳಿದರು. ಯಾವುದೇ ಬಿಲ್ಲು ಆಗಲೆ ಅತಿಪ್ರಾಮುಖ್ಯವಾದದು ಎನ್ನುವುದು ಮಾತನಾಡುವುದಕ್ಕೆ ಮುಂಚೆಗೊತ್ತಾಗುವುದಿಲ್ಲ. ಪೆರಿಗೆ ಆದಮೇಲೆ ಗಂಡು ಹೆಣ್ಣು ಅಂತ ತಿಳಿಯುವುದು. ಈಗ ಈ ಪ್ರೊಟಿಜರ್ ಹೊಸದಾಗಿ ತಂದು ದಿನದಲಿತರಿಗೆ ಕಡಲೆ ಪುರಿ ತಂದು ಮನೆಯಲ್ಲಿ ಇಟ್ಟುಕೊಂಡು ಹಂಚು ವಂತಾಗಿದೆ. ಇದು ಅಷ್ಟು ಮುಖ್ಯವಾದ ಬಿಲ್ಲು ಅಲ್ಲ ಎಂದು ಹೇಳುತ್ತಾರೆ.

೬-೦೦ ಪಿ. ಎಂ.

ಅಧ್ಯಕ್ಷರು.— ಈ ಬಿಲ್ಲು ಮುಖ್ಯವಾದುದಲ್ಲವೆಂದಲ್ಲ ತಮ್ಮಗೆ ಗೊತ್ತಿರುವಹಾಗೆ ಕಾಲಿಂಗ್ ಅಟೆನ್‌ಷನ್ ನೋಟಿಸಿಗೆ ವಿಷ್ಟು ಕಾಲವನ್ನು ವ್ಯಯ ಮಾಡುತ್ತಿದ್ದೇವೆ ಎಂದು ನಾನು ಹೇಳಬೇಕಾಗಿಲ್ಲ. ಪ್ರಥಮವಾಗಿ ತಂಬಾಕು ಚಳುವಳಿ ವಿಚಾರ ಬಂದಿತ್ತು. ಅದಕ್ಕಾಗಿ ಸುಮಾರು ಎರಡೂವರೆ ಗಂಟೆ ಗಳಕಾಲವನ್ನು ವಿನಿಯೋಗಿಸಿದ್ದೇವೆ. ಈ ವಿಚಾರದಲ್ಲಿ ಮಾತನಾಡಲು ಸುಮಾರು ೧೨ ಜನರಿಗೆ ಮಾತ ನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಸುದೀರ್ಘವಾಗಿ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಾದ ತಿಮ್ಮೇಗೌಡರು ಪ್ರಸ್ತಾಪ ಮಾಡಿದ್ದಾರೆ. ಈ ಕಾರಣದಿಂದಾಗಿ ಇವತ್ತು ಸಾಯಂಕಾಲ ೫ ಗಂಟೆಗೆ ಬಿಲ್ಲುಗಳನ್ನು ಚರ್ಚೆಗೆ ತೆಗೆದು ಕೊಳ್ಳಬೇಕಾಯಿತು. ನಾನು ಇವತ್ತು ಮಧ್ಯಾಹ್ನ ೧೨ ಗಂಟೆಯಿಂದ ೫ ಗಂಟೆಯವರೆಗೂ ಕೂತಿದ್ದೆ. ಮಾನ್ಯ ಬಸಪ್ಪನವರು ಬಂದಿದ್ದರಿಂದ ನಾನು ಸ್ವಲ್ಪ ಹೊತ್ತು ಎದು ಹೋಗುವುದಕ್ಕೆ ಅವಕಾಶ ಸಿಕ್ಕಿತು. ಇಲ್ಲದಿದ್ದರೆ ಇದುವರೆಗೂ ನಾನೇ ಕೂಪಿರಬೇಕಾಗಿತ್ತು. ಎಲ್ಲ. ಪಕ್ಷಗಳ ನಾಯಕರುಗಳನ್ನೂ ಕರೆದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೂತು ಚರ್ಚೆಮಾಡಿ ಎಲ್ಲ ಬಿಲ್ಲುಗಳನೂ ಇವತ್ತು ಮತ್ತು ನಾಳೆ ಯೊಳಗೆ ಮುಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ಆ ತೀರ್ಮಾನವನ್ನು ಬದಲಾವಣೆ ಮಾಡು ವುದು ಸರಿಯಲ್ಲ. ತಾವು ದೊಡ್ಡ ಮನಸ್ಸು ಮಾಡಿ ಈ ಮನಿಬಿಲ್‌ನ್ನು ಪಾಸ್ ಮಾಡಿಕೊಟ್ಟರೆ ಸರ್ಕಾರಕ್ಕೆ ಬಹಳ ಅನುಕೂಲವಾಗುತ್ತದೆ. ಆದರೆ ನೀವು ಮಾತನಾಡುವುದಕ್ಕೆ ಇರತಕ್ಕ ಹಕ್ಕಿಗೆ ಚ್ಯುತಿ ತರಬೇಕೆಂಬ ಉದ್ದೇಶ ನಮಗೆ ಇಲ್ಲ.

ಶ್ರೀ ಕೆ, ಪ್ರಭಾಕರ್.— ಸ್ವಾಮಿ ಈಗ ೬ ಗಂಟೆಯಾಗಿದೆ.

SRI C. M. ARUMUGHAM .— Mr. Speaker Sri, on what subj ct how much time should be allowed, it is entirely at the discretion of the hon. Speaker. A big subject may trke 2½ hours and a small subject may take 10 minutes or 5 minutes. Depending on the importances of the matter and its involvement, you give the time. But so for as this Bill is concerned, what he said was it is important Bill. Some body may say that this is not important.

MR. SPEAKER .— All Bills are important.

SRI C. M. ARUMUGHAM .— Now we can take up the Civil Courts Amendment Bill. We will pass it within tan minutes and we will take up this Bill tomorrow. Time must be regulat d. You asked us to come at 12.00 Noon and we come. Now you are asking us to sit for another 15 minutes.

SRI Y. RAMAKRISHNA .— The Civil Courts Amendment Bill is a non-controversial Bill.

MR. SPEAKER .— The hon. Minister may move Bill.